ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು

ಸಂಖ್ಯೆ:ಸಿ3(4)ನಿ.ಹು.ಅ.ಪ : 10/2023–24 ದಿನಾಂಕ: **16. 12. 2023**

:: **ಅಧಿಸೂಚನೆ**::

**ವಿಷಯ :** 2023–24ನೇ ಸಾಲಿಗೆ ರಾಜ್ಯದ ಪ್ರಾಥಮಿಕ, ಪ್ರೌಢಶಾಲಾ ಸಹ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು ತತ್ಸಮಾನ ವೃಂದದ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ಲಿಖಿತ ಪರೀಕ್ಷೆ ನಡೆಸುವ ಮೂಲಕ ಭರ್ತಿ ಮಾಡುವ ಬಗ್ಗೆ

**ಉಲ್ಲೇಖ :** 1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂವ್ಯಶಾಇ 12 ಶಾಸನ 2020 ದಿನಾಂಕ:27.03.2020
2. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಪಿ 8 ಇಟಿಅರ್ 2020 ದಿನಾಂಕ:22.07.2020
3. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಪಿ 494 ಪಿಬಿಎಸ್ 2022 ದಿನಾಂಕ:30.09.2022
4. ಸರ್ಕಾರದ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಇಪಿ 494 ಪಿಬಿಎಸ್ 2022 ದಿ:07-01-2023.

******

ಶಾಲಾ ಶಿಕ್ಷಣ ಇಲಾಖೆಯು ರಾಜ್ಯದಲ್ಲಿ ಶಾಲಾ ವಯೋಮಾನದ ಮಕ್ಕಳ ಸಾರ್ವತ್ರಿಕ ದಾಖಲಾತಿ/ ಹಾಜರಾತಿ, ಶಾಲೆಯಲ್ಲಿ ಉಳಿಯುವಿಕೆಯನ್ನು ಸಾಧಿಸುವುದಲ್ಲದೆ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಲು ಕ್ರಮ ಕೈಗೊಳ್ಳುತ್ತಿದೆ. ಇದಕ್ಕಾಗಿ ಹಲವಾರು ಪ್ರೋತ್ಸಾಹಕ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಈ ರೀತಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವಲ್ಲಿ ಅನುಷ್ಠಾನ, ಮೇಲ್ವಿಚಾರಣೆ, ಉಸ್ತುವಾರಿ ಮತ್ತು ಮಾರ್ಗದರ್ಶನ ಅತೀ ಮುಖ್ಯವೆಂಬುದನ್ನು ಮನಗಾಣಲಾಗಿರುತ್ತದೆ. ಅಂತಹ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಶೈಕ್ಷಣಿಕ ಉಸ್ತುವಾರಿ ಅಧಿಕಾರಿ/ಸಿಬ್ಬಂದಿ ನೇಮಕದ ಅವಶ್ಯಕತೆ ಇರುತ್ತದೆ.

ಇಂತಹ ಇಲಾಖಾ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಅರ್ಹ ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಶಿಕ್ಷಕರು/ಅಧಿಕಾರಿಗಳನ್ನು ಆಯ್ಕೆಮಾಡಿ ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ (Specified Post) ನಿಯೋಜಿಸಲು "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020" ಸೆಕ್ಷನ್ 8(1)ರಲ್ಲಿ ಹಾಗೂ "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2020"ರ ನಿಯಮ-15ರಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಉಲ್ಲೇಖ(3) ಮತ್ತು (4)ರಲ್ಲಿ ಆದೇಶಿಸಿರುವಂತೆ ಪಠ್ಯಕ್ರಮಗಳನ್ನು ಅನುಸರಿಸಲಾಗುವುದು. ಆಯ್ಕೆ ಪರೀಕ್ಷೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ, ಬೆಂಗಳೂರು ಇವರ ವತಿಯಿಂದ ನಡೆಸಲಾಗುವುದು. ಅಧಿಸೂಚಿಸಲಾಗುವ ನಿರ್ದಿಷ್ಟಪಡಿಸಿದ ಹುದ್ದೆಗಳ ಕಾರ್ಯಾವಧಿ ಗರಿಷ್ಠ ಅವಧಿ 5 ವರ್ಷ. ಸದರಿ ಅವಧಿ ಪೂರ್ಣಗೊಳಿಸಿದ ನಂತರ ವರ್ಗಾವಣೆ ನಿಯಮಾನುಸಾರ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿ ಗೊಳಿಸಲಾಗುವುದು.

:: **ಹುದ್ದೆಗಳ ವಿವರ** ::

| ಕ್ರಸಂ | ವೃಂದ | ಅಧಿಸೂಚಿತ ನಿರ್ದಿಷ್ಟಪಡಿಸಿದ ಹುದ್ದೆಗಳು |
|---|---|---|
| 01 | ಪ್ರಾಥಮಿಕ ಶಾಲಾ ಸಹ ಶಿಕ್ಷಕರು | 1. ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು [ಸಿ.ಆರ್.ಪಿ]<br>2. ಕ್ಷೇತ್ರ ಸಂಪನ್ಮೂಲ ವ್ಯಕ್ತಿ[ಬಿ.ಆರ್.ಪಿ–ಪ್ರಾಥಮಿಕ]<br>3. ತಾಂತ್ರಿಕ ಸಹಾಯಕರು[ಪ್ರಾಥಮಿಕ] |
| 02 | ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು ಮತ್ತು ಪದವಿಧರೇತರ ಮುಖ್ಯ ಶಿಕ್ಷಕರು | 1. ಶಿಕ್ಷಣ ಸಂಯೋಜಕರು |
| 03 | ಪ್ರೌಢ ಶಾಲಾ ಸಹ ಶಿಕ್ಷಕರು | 1. ಕ್ಷೇತ್ರ ಸಂಪನ್ಮೂಲ ವ್ಯಕ್ತಿ[ಬಿ.ಆರ್.ಪಿ–ಪ್ರೌಢ]<br>2. ಶಿಕ್ಷಣ ಸಂಯೋಜಕರು[ಪ್ರೌಢ]<br>3. ತಾಂತ್ರಿಕ ಸಹಾಯಕರು[ಪ್ರೌಢ] |
| 04 | ಪ್ರೌಢ ಶಾಲಾ ಮುಖ್ಯ ಶಿಕ್ಷಕರು | 1. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ [ಬಿ.ಆರ್.ಸಿ]<br>2. ಸಹಾಯಕ ಯೋಜನಾ ಸಮನ್ವಯಾಧಿಕಾರಿ [ಎ.ಪಿ.ಸಿ] [ಸಮಗ್ರ ಶಿಕ್ಷಣ ಕರ್ನಾಟಕ]<br>3. ವಿಷಯ ಪರಿವೀಕ್ಷಕರು, [ಉಪನಿರ್ದೇಶಕರ ಕಛೇರಿ ಮತ್ತು ವಿಭಾಗೀಯ ಸಹ ನಿರ್ದೇಶಕರ ಕಛೇರಿ]<br>4. ಸಹಾಯಕ ನಿರ್ದೇಶಕರು[ಮಧ್ಯಾಹ್ನ ಉಪಹಾರ ಯೋಜನೆ] |

## ಅರ್ಜಿ ಸಲ್ಲಿಸುವ ಪ್ರಕ್ರಿಯೆ:–

1. ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸೇವಾ ವಿವರಗಳನ್ನು ಇಇಡಿಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನಮೂದಿಸುವುದು. ಮುಂದುವರೆದು ಇಇಡಿಎಸ್‌ನಲ್ಲಿ ಇಂದೀಕರಣವಾಗದ ಪ್ರಯುಕ್ತ ಅರ್ಜಿಯಲ್ಲಿ ಅಥವಾ ಅಂತಿಮ ಪಟ್ಟಿಯಲ್ಲಿ ವ್ಯತ್ಯಾಸ ಉಂಟಾದಲ್ಲಿ ಸಂಬಂಧಿಸಿದ ಶಿಕ್ಷಕರೇ ಹೊಣೆಗಾರರಾಗಿರುತ್ತಾರೆ. ಆದ್ದರಿಂದ ತಮ್ಮ ಸ್ಪಷ್ಟ ಮಾಹಿತಿಯನ್ನು ದಾಖಲೆಗಳೊಂದಿಗೆ ಇಂದೀಕರಿಸಬೇಕು.

2. ಶಿಕ್ಷಕರ ದತ್ತಾಂಶ ಸಂಗ್ರಹಣೆ ಪೋರ್ಟಲ್‌ಗೆ ಲಾಗ್–ಇನ್ ಆಗಲು ಬಳಸುವ ಕೆ.ಜಿ.ಐ.ಡಿ ಸಂಖ್ಯೆಯನ್ನು ಬಳಸಿ, ಈ ಪ್ರಕ್ರಿಯೆಗಾಗಿಯೇ ಸಿದ್ಧಪಡಿಸಿರುವ ತಂತ್ರಾಂಶದಲ್ಲಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
3. ಹೆಚ್ಚಿನ ಶೈಕ್ಷಣಿಕ ಅರ್ಹತೆ, ಸೇವಾ ಅನುಭವ, ಗಣಕಯಂತ್ರ ತರಬೇತಿ ಮತ್ತು ಶೈಕ್ಷಣಿಕ ಪ್ರಕಟಣೆಗಳಿಗೆ ಸಂಬಂಧಿಸಿದ ಪೂರಕ ದಾಖಲೆಗಳನ್ನು ಅರ್ಜಿಯ ಜೊತೆಯಲ್ಲಿಯೇ ಅಪ್–ಲೋಡ್ ಮಾಡಬೇಕು ಹಾಗೂ ಇದರ ಮೂಲ ಪ್ರತಿಗಳನ್ನು ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ], ಇವರಿಗೆ ಸಲ್ಲಿಸುವುದು.

**ಅರ್ಹತಾ ಷರತ್ತುಗಳು (ಅಧಿಸೂಚನೆ ದಿನಾಂಕಕ್ಕೆ):–**

1. ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಘೋಷಣೆಯಾಗಿರಬೇಕು.
2. ವಯೋಮಿತಿ 55 ವರ್ಷಗಳನ್ನು ಮೀರಿರಬಾರದು.
3. ವಿಷಯ ಪರಿವೀಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಆಯಾಯ ವಿಷಯದಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕನಿಷ್ಠ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ಬೋಧನಾ ಅನುಭವ ಇರಬೇಕು.
4. ಅಭ್ಯರ್ಥಿಯು ಪ್ರಸ್ತುತ ಹುದ್ದೆ ಮತ್ತು ಸ್ಥಳದಲ್ಲಿ ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರೈಸಿರಬೇಕು.
5. ಈ ಹಿಂದೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ಶಾಲೆಗೆ ಹಿಮ್ಮುಖ ವರ್ಗಾವಣೆಗೊಂಡು ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಕನಿಷ್ಠ 5 ವರ್ಷಗಳು ಶಾಲೆಯಲ್ಲಿ ಸೇವೆ ಸಲ್ಲಿಸಿರಬೇಕು.

**ವಿಶೇಷ ಸೂಚನೆ :–**

ಪ್ರಸ್ತುತ ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಥಮಿಕ ಮತ್ತು ಪ್ರೌಢಶಾಲಾ ವೃಂಧದ ಶಿಕ್ಷಕರು ಸದರಿ ಹುದ್ದೆಗಳಿಗೆ ಪರೀಕ್ಷೆ ಮೂಲಕ ಆಯ್ಕೆಯಾಗಿರುವುದಿಲ್ಲ. ಪ್ರಯುಕ್ತ. ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಶಿಕ್ಷಕರು ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಮುಂದುವರೆಯಲು "ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020" ಸೆಕ್ಷನ್ 8(1)ರಲ್ಲಿ ಆದೇಶಿಸಿರುವಂತೆ ಲಿಖಿತ ಪರೀಕ್ಷೆಗೆ ಹಾಜರಾಗುವುದು ಕಡ್ಡಾಯವಾಗಿರುತ್ತದೆ. ಲಿಖಿತ ಪರೀಕ್ಷೆಯ ನಂತರ ನಿಯಮಾನುಸಾರ ಆನ್‌ಲೈನ್ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು. **ಹಾಲಿ ಎಲ್ಲಾ ತಾಂತ್ರಿಕ ಸಹಾಯಕರ ಹುದ್ದೆಗಳನ್ನು ಖಾಲಿ ಹುದ್ದೆಗಳು ಎಂದು ಭಾವಿಸಲಾಗುವುದು. ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಮಾತ್ರ ಇರುತ್ತದೆ.**

ನಿರ್ಬಂಧಗಳು:–

**ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ಸಿ.ಆರ್.ಪಿ, ಬಿ.ಆರ್.ಪಿ, ಶಿಕ್ಷಣ ಸಂಯೋಜಕರು ಮತ್ತು ತಾಂತ್ರಿಕ ಸಹಾಯಕರು ಈ ಹುದ್ದೆಗಳಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು:**

**(ಅ) ಸಾಮಾನ್ಯ ಅರ್ಹತೆಗಳು**

1. ಈ ಜ್ಞಾಪನಾ ಹೊರಡಿಸಿದ ದಿನಾಂಕಕ್ಕೆ ಅಭ್ಯರ್ಥಿಗಳ ವಯೋಮಿತಿ 55 ವರ್ಷಗಳನ್ನು ಮೀರಿರಬಾರದು.
2. ಈ ಹುದ್ದೆಗಳಿಗೆ ಆಯ್ಕೆ ಬಯಸಿ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಕಡ್ಡಾಯವಾಗಿ ಶಿಕ್ಷಕರ ಇ.ಇ.ಡಿ.ಎಸ್ ತಂತ್ರಾಂಶದಲ್ಲಿ ಸಂಪೂರ್ಣ ಸೇವಾ ಮಾಹಿತಿಯನ್ನು ಇಂದೀಕರಿಸಿರಬೇಕು.
3. ಖಾಯಂಪೂರ್ವ ಸೇವಾವಧಿ ತೃಪ್ತಿಕರವೆಂದು ಘೋಷಣೆಯಾಗಿರಬೇಕು.
4. ಈ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಂಡವರಿಗೆ ಮುಂದಿನ 3 ವರ್ಷಗಳ ಅವಧಿಯೊಳಗೆ ಯಾವುದೇ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ (ಶಿಸ್ತು ಪ್ರಕರಣಗಳನ್ನು ಹೊರತುಪಡಿಸಿ).
5. ಶಿಕ್ಷಣ ಸಂಯೋಜಕರು/ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು/ ಗುಚ್ಛ ಸಂಪನ್ಮೂಲ ವ್ಯಕ್ತಿಗಳು/ ತಾಂತ್ರಿಕ ಸಹಾಯಕರು (ಪ್ರಾಥಮಿಕ ಶಾಲಾ ವೃಂದ) ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕಕ್ಕೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಆಯಾ ಜಿಲ್ಲೆಯ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಆಯಾ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದ್ಯತೆ/ ಮೆರಿಟ್ ಆಧಾರದ ಮೇಲೆ ಸ್ಥಳ ಹಂಚಿಕೆ ಮಾಡಲಾಗುವುದು.
6. ಅನ್ಯ ಇಲಾಖೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಉನ್ನತ ವ್ಯಾಸಂಗಕ್ಕೆ ನಿಯೋಜನೆಗೊಂಡಿರುವ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಮತ್ತು ಇತರೆ ಸಮಾನಾಂತರ ಶಿಕ್ಷಕೇತರ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
7. ಇಲಾಖಾ ವಿಚಾರಣೆ/ಶಿಸ್ತು ಪ್ರಕರಣ/ನ್ಯಾಯಾಲಯ ಪ್ರಕರಣ/ಎಸಿಬಿ/ಲೋಕಾಯುಕ್ತ/ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
8. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಘ/ಸಂಸ್ಥೆ ಮತ್ತು ಇತರೆ ಯಾವುದೇ ಸಹಕಾರ ಸಂಘ/ಸಂಸ್ಥೆಗಳ ಚುನಾಯಿತ ಸದಸ್ಯರು, ನಾಮನಿರ್ದೇಶಿತ ಸದಸ್ಯರು, ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಪದಾಧಿಕಾರಿಗಳು ಸೇರಿದಂತೆ ಯಾವುದೇ ಹುದ್ದೆಯನ್ನು ಹೊಂದಿರತಕ್ಕದಲ್ಲ. ಒಂದು ವೇಳೆ ಹೊಂದಿದ್ದಲ್ಲಿ ಆ ಹುದ್ದೆಯನ್ನು ತ್ಯಜಿಸಿ ಆ ಬಗ್ಗೆ ಲಿಖಿತ ಮುಚ್ಚಳಿಕೆಯನ್ನು ನೀಡಿದ ನಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಒಂದು ಬಾರಿ ನಿರ್ದಿಷ್ಟಪಡಿಸಿದ ಹುದ್ದೆಯ ಕರ್ತವ್ಯಕ್ಕೆ ಹಾಜರಾದ ನಂತರ ಮೇಲಿನ ಯಾವುದೇ ಹುದ್ದೆಯನ್ನು ಹೊಂದಲು ಅವಕಾಶವಿರುವುದಿಲ್ಲ
9. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರಾಥಮಿಕ ಶಾಲೆಗಳಲ್ಲಿ ಸೇವಾನುಭವವಿರಬೇಕು ಹಾಗೂ ಪ್ರಸ್ತುತ ಹುದ್ದೆ ಮತ್ತು ಸ್ಥಳದಲ್ಲಿ ಕನಿಷ್ಠ 3 ವರ್ಷಗಳ ಸೇವೆಯನ್ನು ಪೂರೈಸಿರಬೇಕು. (ಪ್ರಸ್ತುತ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಮರುಹಂಚಿಕೆಯಾಗಿದ್ದಲ್ಲಿ ಅಂತಹ ಶಿಕ್ಷಕರು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಬಹುದಾಗಿದೆ)

h

10. ಈ ಹಿಂದೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ಶಾಲೆಗೆ ಹಿಮ್ಮುಖ ವರ್ಗಾವಣೆಗೊಂಡು ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಕನಿಷ್ಠ 5 ವರ್ಷಗಳು ಶಾಲೆಯಲ್ಲಿ ಸೇವೆ ಸಲ್ಲಿಸಿರಬೇಕು.
11. ಪ್ರಾಥಮಿಕ ಶಾಲಾ ಶಿಕ್ಷಕರು ಇಲಾಖಾ ಅನುಮತಿ ಪಡೆದು ಪದವೀಧರ ಪ್ರಾಥಮಿಕ ಶಿಕ್ಷಕರು (6–8ನೇ ತರಗತಿ) ಹುದ್ದೆಗೆ ಹಾಜರಾಗಿದ್ದ ಪಕ್ಷದಲ್ಲಿ ಹೊಸ ಹುದ್ದೆಯಲ್ಲಿ 10 ವರ್ಷಗಳ ಬೋಧನಾ ಅನುಭವ ಇರಬೇಕು.
12. ನಿರ್ದಿಷ್ಟಪಡಿಸಿದ ಹುದ್ದೆಗಳ ಕಾರ್ಯಭಾರಗಳನ್ನು ಅವರ ಜಾಬ್ ಚಾರ್ಟನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಅಭ್ಯರ್ಥಿಯು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು. ಗಂಭೀರ ಕಾಯಿಲೆಗಳಿಂದ (ಕ್ಯಾನ್ಸರ್, ಮೂತ್ರ ಪಿಂಡ ವೈಫಲ್ಯ, ಹೃದಯ ಸಂಬಂಧಿತ ಕಾಯಿಲೆಗಳು ಇವೇ ಮುಂತಾದವು) ಬಳಲುತ್ತಿರುವವರಿಗೆ ಹಾಗೂ ಅಂಗವಿಕಲ ಶಿಕ್ಷಕರು ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
13. ಬಿ.ಐ.ಇ.ಆರ್.ಟಿ, ದೈಹಿಕ ಶಿಕ್ಷಣ ಶಿಕ್ಷಕರು, ವೃತ್ತಿ ಶಿಕ್ಷಕರು, ಇತರೆ ವಿಶೇಷ ಶಿಕ್ಷಕರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
14. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಹಾಗೂ ಕೌನ್ಸಿಲಿಂಗ್‌ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗದಿರುವವರು, ಮುಂದಿನ 05 ವರ್ಷ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
15. ಅರ್ಜಿ ಸಲ್ಲಿಸಿದ ಅಭ್ಯರ್ಥಿಯು ಸ್ಥಳ ನಿಯುಕ್ತಿ ಕೌನ್ಸಿಲಿಂಗ್ ದಿನಾಂಕಕ್ಕೆ ಅರ್ಜಿ ಸಲ್ಲಿಸಿದ ಶಾಲೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿರಬೇಕು. ಒಂದು ವೇಳೆ ವರ್ಗಾವಣೆ, ಬಡ್ತಿ ಮತ್ತು ಇನ್ನಿತರೆ ಕಾರಣಗಳಿಂದ ಬೇರೆ ಶಾಲೆಗೆ ಸ್ಥಳ ನಿಯುಕ್ತಿ ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ನಿರ್ದಿಷ್ಟಪಡಿಸಿದ ಹುದ್ದೆಯ ಕರ್ತವ್ಯದ ಅವಧಿಯಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಮುಂದಿನ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.
16. ಈ ವೃಂದಗಳಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.
17. ಅರ್ಜಿದಾರರು ಆನ್ ಲೈನ್ ಭರ್ತಿ ಮಾಡಿ ಸಲ್ಲಿಸಿರುವ ಮಾಹಿತಿಯು ಸತ್ಯ ನಿಷ್ಠವಾಗಿಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ, ಶಿಸ್ತುಕ್ರಮ ಕೈಗೊಳ್ಳಲಾಗುವುದು.
18. ಪ್ರಸ್ತುತ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ 5 ವರ್ಷಗಳ ಸೇವೆಯನ್ನು ಪೂರೈಸಿ ಹೊರಹೋಗುತ್ತಿರುವ ಅಭ್ಯರ್ಥಿಗಳು, ಅಧಿಸೂಚಿತ ಹುದ್ದೆಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.

**<u>ಆ) ಹುದ್ದೆವಾರು ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು :</u>**

1. ಶಿಕ್ಷಣ ಸಂಯೋಜಕರು (ಪ್ರಾಥಮಿಕ) – ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಲ್ಲಿ ಕನಿಷ್ಠ 10 ವರ್ಷಗಳ ಬೋಧನಾ ಅನುಭವ ಇರಬೇಕು. (ಶಿಕ್ಷಣ ಸಂಯೋಜಕರ ಹುದ್ದೆಗೆ ಈ ಷರತ್ತು ಅನ್ವಯಿಸುವುದಿಲ್ಲ, ಏಕೆಂದರೆ ಹಿರಿಯ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರು/ ಪದವೀಧರೇತರ ಮುಖ್ಯಶಿಕ್ಷಕರು ಈಗಾಗಲೇ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವಾನುಭವ ಹೊಂದಿ ಜೇಷ್ಠತೆಯ ಆಧಾರದ ಮೇಲೆ ಪದವೀಧರೇತರ ಮುಖ್ಯಶಿಕ್ಷಕರಾಗಿ ಬಡ್ತಿ ಪಡೆದಿರುವುದರಿಂದ ಈ ಷರತ್ತಿನಿಂದ ವಿನಾಯತಿ ನೀಡಲಾಗಿದೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು.
2. ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು (ಪ್ರಾಥಮಿಕ)–ಹುದ್ದೆಗೆ ಅರ್ಜಿ ಸಲ್ಲಿಸಲು ಸಹ ಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರಾಥಮಿಕ ಶಾಲೆಗಳಲ್ಲಿ ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು.
3. ಗುಚ್ಛ ಸಂಪನ್ಮೂಲ ವ್ಯಕ್ತಿಗಳು (ಪ್ರಾಥಮಿಕ) ಹುದ್ದೆಗೆ ಅರ್ಜಿ ಸಲ್ಲಿಸಲು ಸಹ ಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರಾಥಮಿಕ ಶಾಲೆಗಳಲ್ಲಿ ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು.
4. ತಾಂತ್ರಿಕ ಸಹಾಯಕರು (ಪ್ರಾಥಮಿಕ) ಹುದ್ದೆಗೆ ಅರ್ಜಿ ಸಲ್ಲಿಸಲು ಸಹ ಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರಾಥಮಿಕ ಶಾಲೆಗಳಲ್ಲಿ ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾವಧಿ ಪೂರ್ಣಗೊಂಡಿರಬೇಕು. ಹಾಗೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಹಾಯಕರು ಸಹ ಕಡ್ಡಾಯವಾಗಿ ಪರೀಕ್ಷೆ ಬರೆದು ಆಯ್ಕೆಯಾಗಬೇಕು (ಇದೇ ಮೊದಲ ಬಾರಿಗೆ ತಾಂತ್ರಿಕ ಸಹಾಯಕರ ಹುದ್ದೆಗಳಿಗೆ ಪರೀಕ್ಷೆ ನಡೆಯುತ್ತಿರುವುದರಿಂದ)

**<u>ಪ್ರೌಢ ಶಾಲಾ ಶಿಕ್ಷಕರ ವೃಂದದ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು ಮತ್ತು ತಾಂತ್ರಿಕ ಸಹಾಯಕರು ಈ ಹುದ್ದೆಗಳಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು :</u>**

**<u>(ಅ) ಸಾಮಾನ್ಯ ಅರ್ಹತೆಗಳು</u>**

1. ಸರ್ಕಾರಿ ಪ್ರೌಢಶಾಲಾ ಕಲಾ/ವಿಜ್ಞಾನ/ಭಾಷಾ ಸಹಶಿಕ್ಷಕರ ವೃಂದದ ಶಿಕ್ಷಕರು ಈ ಕೆಳಕಂಡ ಅರ್ಹತೆ ಆಧರಿಸಿ ಆನ್‌ಲೈನ್ ಮೂಲಕ ಪರೀಕ್ಷೆಗೆ ನೊಂದಾಯಿಸಲು ಅರ್ಹರಾಗಿರುತ್ತಾರೆ.
2. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅಭ್ಯರ್ಥಿಗಳ ವಯೋಮಿತಿ 55 ವರ್ಷಗಳು ಮೀರಿರಬಾರದು.

3. ಈ ಹುದ್ದೆಗಳಿಗೆ ಆಯ್ಕೆ ಬಯಸಿ ಅರ್ಜಿಯನ್ನು ಸಲ್ಲಿಸಲು ಇಚ್ಛಿಸುವ ಅಭ್ಯರ್ಥಿಯು ಶಿಕ್ಷಕರ ಇಇಡಿಎಸ್ ತಂತ್ರಾಂಶದಲ್ಲಿ ತಮ್ಮ ಸಂಪೂರ್ಣ ಸೇವೆಯನ್ನು ನಮೂದಿಸಿರಬೇಕು.
4. ಖಾಯಂಪೂರ್ವ ಸೇವಾವಧಿ ಸಂಪೂರ್ಣವಾಗಿ ಘೋಷಿಸಿರಬೇಕು.
5. ಈ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಂಡವರಿಗೆ ಮುಂದಿನ 3 ವರ್ಷಗಳ ಅವಧಿಯೊಳಗೆ ಯಾವುದೇ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ (ಶಿಸ್ತು ಪ್ರಕರಣಗಳನ್ನು ಹೊರತುಪಡಿಸಿ).
6. ಶಿಕ್ಷಣ ಸಂಯೋಜಕರು/ ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು/ ತಾಂತ್ರಿಕ ಸಹಾಯಕರು (ಪ್ರೌಢಶಾಲಾ ವೃಂದ) ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕಕ್ಕೆ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು ಆಯಾ ಜಿಲ್ಲೆಯ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಆಯಾ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದ್ಯತೆ/ ಮೆರಿಟ್ ಆಧಾರದ ಮೇಲೆ ಸ್ಥಳ ಹಂಚಿಕೆ ಮಾಡಲಾಗುವುದು.
7. ಶಾಲಾ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕೇತರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮತ್ತು ಉನ್ನತ ವ್ಯಾಸಂಗ (ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ ಶಿಕ್ಷಣ ಹಾಗೂ ಇನ್ನಾವುದೇ) ನಿಯೋಜಿತಗೊಂಡಿರುವ ಶಿಕ್ಷಕರು ಹಾಗೂ ಪ್ರಸ್ತುತ ಶಿಕ್ಷಣ ಸಂಯೋಜಕರಾಗಿ/ ಬಿ.ಆರ್.ಪಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
8. ಇಲಾಖಾ ವಿಚಾರಣೆ/ಶಿಸ್ತು ಪ್ರಕರಣ/ನ್ಯಾಯಾಲಯ ಪ್ರಕರಣ/ಎಸಿಬಿ/ಲೋಕಾಯುಕ್ತ/ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
9. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಘ/ಸಂಸ್ಥೆ ಮತ್ತು ಇತರೆ ಯಾವುದೇ ಸಹಕಾರ ಸಂಘ/ಸಂಸ್ಥೆಗಳ ಚುನಾಯಿತ ಸದಸ್ಯರು, ನಾಮನಿರ್ದೇಶಿತ ಸದಸ್ಯರು, ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಪದಾಧಿಕಾರಿಗಳು ಸೇರಿದಂತೆ ಯಾವುದೇ ಹುದ್ದೆಯನ್ನು ಹೊಂದಿರತಕ್ಕದಲ್ಲ. ಒಂದು ವೇಳೆ ಹೊಂದಿದ್ದಲ್ಲಿ ಆ ಹುದ್ದೆಯನ್ನು ತ್ಯಜಿಸಿ ಆ ಬಗ್ಗೆ ಲಿಖಿತ ಮುಚ್ಚಳಿಕೆಯನ್ನು ನೀಡಿದ ನಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಒಂದು ಬಾರಿ ನಿರ್ದಿಷ್ಟಪಡಿಸಿದ ಹುದ್ದೆಯ ಕರ್ತವ್ಯಕ್ಕೆ ಹಾಜರಾದ ನಂತರ ಮೇಲಿನ ಯಾವುದೇ ಹುದ್ದೆಯನ್ನು ಹೊಂದಲು ಅವಕಾಶವಿರುವುದಿಲ್ಲ.
10. ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಮತ್ತು ತಾಂತ್ರಿಕ ಸಹಾಯಕರು (ಪ್ರೌಢ ಶಾಲಾ ತತ್ಸಮಾನ ವೃಂದ) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢ ಶಾಲೆಗಳಲ್ಲಿ ಸಹಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರೌಢ ಶಾಲೆಗಳಲ್ಲಿ ಸೇವಾನುಭವವಿರಬೇಕು. ಹಾಗೂ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಕನಿಷ್ಠ 3 ವರ್ಷಗಳ ಸೇವಾವಧಿ ಪೂರ್ಣಗೊಂಡಿರಬೇಕು. (ಪ್ರಸ್ತುತ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಮರುಹಂಚಿಕೆಯಾಗಿದ್ದಲ್ಲಿ ಅಂತಹ ಶಿಕ್ಷಕರುಗಳು ಹಿಂದಿನ ಶಾಲಾ ಅವಧಿಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.)
11. ಈ ಹಿಂದೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ಶಾಲೆಗೆ ಹಿಮ್ಮುಖ ವರ್ಗಾವಣೆಗೊಂಡು ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಕನಿಷ್ಟ 5 ವರ್ಷಗಳು ಶಾಲೆಯಲ್ಲಿ ಸೇವೆ ಸಲ್ಲಿಸಿರಬೇಕು.
12. ಭಾಷಾ ಅಲ್ಪಸಂಖ್ಯಾತರ ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು (ಪ್ರೌಢಶಾಲಾ ವೃಂದ) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲೆಗಳಲ್ಲಿ ಸಹಶಿಕ್ಷಕರಾಗಿ ಅಧಿಸೂಚನೆ ದಿನಾಂಕಕ್ಕೆ ಕನಿಷ್ಠ 5 ವರ್ಷಗಳ ಸೇವಾನುಭವ ಇರಬೇಕು. ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಕನಿಷ್ಠ 3 ವರ್ಷಗಳ ಸೇವಾವಧಿ ಪೂರ್ಣಗೊಂಡಿರಬೇಕು. ಪ್ರಸ್ತುತ ಸಾಲಿನಲ್ಲಿ ಹೆಚ್ಚುವರಿ ಶಿಕ್ಷಕರಾಗಿ ಮರುಹಂಚಿಕೆಯಾಗಿದ್ದಲ್ಲಿ ಅಂತಹ ಶಿಕ್ಷಕರುಗಳು ಹಿಂದಿನ ಶಾಲಾ ಅವಧಿಯ ಸೇವೆಯನ್ನು ಗಣನೆಗೆ ತೆಗೆದುಕೊಂಡು ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.
13. ನಿರ್ದಿಷ್ಟಪಡಿಸಿದ ಹುದ್ದೆಗಳ ಕಾರ್ಯಭಾರಗಳನ್ನು ಅವರ ಜಾಬ್ ಚಾರ್ಟ್‌ನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಅಭ್ಯರ್ಥಿಯು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು. ಗಂಭೀರ ಕಾಯಿಲೆಗಳಿಂದ (ಕ್ಯಾನ್ಸರ್, ಮೂತ್ರ ಪಿಂಡ ವೈಫಲ್ಯ, ಹೃದಯ ಸಂಬಂಧಿತ ಕಾಯಿಲೆಗಳು ಇವೇ ಮುಂತಾದವು) ಬಳಲುತ್ತಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
14. ಬಿ.ಐ.ಇ.ಆರ್.ಟಿ, ದೈಹಿಕ ಶಿಕ್ಷಣ ಶಿಕ್ಷಕರು, ವೃತ್ತಿ ಶಿಕ್ಷಕರು, ಹಾಗೂ ಇತರೆ ವಿಶೇಷ ಶಿಕ್ಷಕರು ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
15. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಕೌನ್ಸಲಿಂಗ್‌ಗೆ ಗೈರು ಹಾಜರಾದ ಹಾಗೂ ಕೌನ್ಸಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗದಿರುವವರು, ಮುಂದಿನ 05 ವರ್ಷ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
16. ಅರ್ಜಿ ಸಲ್ಲಿಸಿದ ಅಭ್ಯರ್ಥಿಯು ಸ್ಥಳ ನಿಯುಕ್ತಿ ಕೌನ್ಸಿಲಿಂಗ್ ದಿನಾಂಕಕ್ಕೆ ಅರ್ಜಿ ಸಲ್ಲಿಸಿದ ಶಾಲೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿರಬೇಕು. ಒಂದು ವೇಳೆ ವರ್ಗಾವಣೆ, ಬಡ್ತಿ ಮತ್ತು ಇನ್ನಿತರೆ ಕಾರಣಗಳಿಂದ ಬೇರೆ ಶಾಲೆಗೆ ಸ್ಥಳ ನಿಯುಕ್ತಿ ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ನಿರ್ದಿಷ್ಟಪಡಿಸಿದ ಹುದ್ದೆಯ ಕರ್ತವ್ಯದ ಅವಧಿಯಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಮುಂದಿನ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.
17. ಪ್ರೌಢಶಾಲಾ ಸಹ ಶಿಕ್ಷಕರು ನಿರ್ದಿಷ್ಟಪಡಿಸಿದ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಈಗಾಗಲೇ ಒಂದು ಬಾರಿ ಸದರಿ ಅಧಿಸೂಚಿತ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿದ ನಂತರ ಕನಿಷ್ಠ ಶಾಲೆಗಳಲ್ಲಿ 05 ವರ್ಷಗಳು ಬೋಧನಾ ಕಾರ್ಯದಲ್ಲಿ ಕರ್ತವ್ಯ ನಿರ್ವಹಿಸಿರಬೇಕು.
18. ಈ ವೃಂದಗಳಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಮುಂದಿನ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.

19. ಅರ್ಜಿದಾರರು ಆನ್ ಲೈನ್ ಭರ್ತಿ ಮಾಡಿ ಸಲ್ಲಿಸಿರುವ ಮಾಹಿತಿಯು ಸತ್ಯ ನಿಷ್ಠವಾಗಿಲ್ಲದಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ, ಶಿಸ್ತುಕ್ರಮ ಕೈಗೊಳ್ಳಲಾಗುವುದು.

**ಆ) ಹುದ್ದೆವಾರು ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು :**

1. ಶಿಕ್ಷಣ ಸಂಯೋಜಕರು(ಪ್ರೌಢ)– ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಸಹಶಿಕ್ಷಕ/ಟಿಜಿಟಿ ವೃಂದದವರು ಕ್ರಮವಾಗಿ ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ/ಟಿ.ಜಿ.ಟಿ+ಪ್ರೌಢಶಾಲಾ ಸಹ ಶಿಕ್ಷಕರಾಗಿ(ಒಟ್ಟಾರೆ 10 ವರ್ಷಗಳು ಬೋಧನಾನುಭವ) ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು.
2. ಶಿಕ್ಷಣ ಸಂಯೋಜಕರು(ಪ್ರೌಢ–ಉರ್ದು/ಮರಾಠಿ/ತೆಲುಗು/ತಮಿಳು) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಸಹಶಿಕ್ಷಕ/ಟಿಜಿಟಿ ವೃಂದದವರು ಕ್ರಮವಾಗಿ ಪ್ರೌಢಶಾಲೆಗಳಲ್ಲಿ ಆಯಾ ಮಾಧ್ಯಮದ ಸಹ ಶಿಕ್ಷಕರಾಗಿ/ಟಿ.ಜಿ.ಟಿ+ಪ್ರೌಢಶಾಲಾ ಸಹ ಶಿಕ್ಷಕರಾಗಿ(ಒಟ್ಟಾರೆ 10 ವರ್ಷಗಳು ಬೋಧನಾನುಭವ) ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರೌಢಶಾಲೆಗಳಲ್ಲಿ ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾವಧಿ ಪೂರ್ಣಗೊಂಡಿರಬೇಕು.
3. ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು(ಪ್ರೌಢ–ಕಲಾ)–ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಕಲಾ/ಭಾಷಾ ಸಹಶಿಕ್ಷಕ ವೃಂದದವರು (ಹಿಂದಿ ಶಿಕ್ಷಕರನ್ನು ಹೊರತುಪಡಿಸಿ)ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಪ್ರೌಢಶಾಲೆಗಳಲ್ಲಿ ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು.
4. ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು(ಪ್ರೌಢ–ವಿಜ್ಞಾನ) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಪಿಸಿಎಂ/ಸಿಬಿಝೆಡ್ ಸಹಶಿಕ್ಷಕ/ಟಿಜಿಟಿ ವೃಂದದವರು ಕ್ರಮವಾಗಿ ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಾಗಿ/ಟಿ.ಜಿ.ಟಿ+ಪ್ರೌಢಶಾಲಾ ಸಹ ಶಿಕ್ಷಕರಾಗಿ(ಒಟ್ಟಾರೆ 10 ವರ್ಷಗಳ ಬೋದನಾನುಭವ) ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಸೇವಾನುಭವವಿರಬೇಕು ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು.
5. ತಾಂತ್ರಿಕ ಸಹಾಯಕರು (ಪ್ರೌಢ) ಹುದ್ದೆಗೆ ಅರ್ಜಿ ಸಲ್ಲಿಸಲು ಪ್ರೌಢಶಾಲಾ ಸಹಶಿಕ್ಷಕ (ಕಲಾ, ಭಾಷೆ, ವಿಜ್ಞಾನ) (ಟಿಜಿಟಿ ವೃಂದದವರು ಕ್ರಮವಾಗಿ ಸಹ ಶಿಕ್ಷಕರಾಗಿ ಒಟ್ಟಾರೆ 10 ವರ್ಷಗಳು ಬೋಧನಾನುಭವ) ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ 10 ವರ್ಷಗಳು ಸೇವಾನುಭವವಿರಬೇಕು, ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಶಾಲೆಯಲ್ಲಿ ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಕನಿಷ್ಠ ಮೂರು ವರ್ಷಗಳ ನಿರಂತರ ಸೇವಾ ಅವಧಿ ಪೂರ್ಣಗೊಂಡಿರಬೇಕು. ಹಾಗೂ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ಸಹಾಯಕರು ಸಹ ಕಡ್ಡಾಯವಾಗಿ ಪರೀಕ್ಷೆ ಬರೆದು ಆಯ್ಕೆಯಾಗಬೇಕು (ಇದೇ ಮೊದಲ ಬಾರಿಗೆ ತಾಂತ್ರಿಕ ಸಹಾಯಕರ ಹುದ್ದೆಗಳಿಗೆ ಪರೀಕ್ಷೆ ನಡೆಯುತ್ತಿರುವುದರಿಂದ)

**ಪ್ರೌಢ ಶಾಲಾ ಮುಖ್ಯ ಶಿಕ್ಷಕರು ತತ್ಸಮಾನ ಗ್ರೂಪ್–ಬಿ ವೃಂದದ ಬಿ.ಆರ್.ಸಿ, ಎ.ಪಿ.ಸಿ.ಓ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು ಹಾಗೂ ಸಹಾಯಕ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಈ ಹುದ್ದೆಗಳಿಗೆ ಆಯ್ಕೆಯಾಗಲು ಇರಬೇಕಾದ ಅರ್ಹತೆಗಳು :**

1. ಖಾಯಂಪೂರ್ವ ಸೇವಾವಧಿ ಸಂಪೂರ್ಣವಾಗಿ ಘೋಷಿಸಿರಬೇಕು.
2. ಪ್ರೌಢ ಶಾಲಾ ಮುಖ್ಯ ಶಿಕ್ಷಕರು ತತ್ಸಮಾನ ಗ್ರೂಪ್–ಬಿ ವೃಂದದ ಬಿ.ಆರ್.ಸಿ, ಎ.ಪಿ.ಸಿ.ಓ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು ಹಾಗೂ ಸಹಾಯಕ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಆಯ್ಕೆ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕಕ್ಕೆ 55 ವರ್ಷಗಳ ವಯೋಮಿತಿ ಒಳಗಿರಬೇಕು. ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳು ಆಯಾ ಜಿಲ್ಲೆಯ ಹುದ್ದೆಗಳಿಗೆ ಮಾತ್ರ ಅರ್ಜಿ ಸಲ್ಲಿಸಬೇಕು. ಆಯಾ ಜಿಲ್ಲೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಆದ್ಯತೆ/ ಮೆರಿಟ್ ಆಧಾರದ ಮೇಲೆ ಸ್ಥಳ ಹಂಚಿಕೆ ಮಾಡಲಾಗುವುದು.
3. ಈ ಜ್ಞಾಪನ ಹೊರಡಿಸಿದ ದಿನಾಂಕಕ್ಕೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಯು ಪ್ರಸ್ತುತ ಸ್ಥಳದಲ್ಲಿ ಕನಿಷ್ಠ 3 ವರ್ಷ ಸೇವೆ ಸಲ್ಲಿಸಿರಬೇಕು. (ಮುಖ್ಯಶಿಕ್ಷಕರು/ಉಪನ್ಯಾಸಕರ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸಿರಬೇಕು)
4. ವಿಷಯ ಪರಿವೀಕ್ಷಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಆಯಾಯ ವಿಷಯದಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕನಿಷ್ಠ 10 ವರ್ಷಗಳಿಗೆ ಕಡಿಮೆ ಇಲ್ಲದಂತೆ ಬೋಧನಾ ಅನುಭವ ಇರಬೇಕು.
5. ಈ ಹಿಂದೆ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ ಕೆಲಸ ನಿರ್ವಹಿಸಿ ಶಾಲೆಗೆ ಹಿಮ್ಮುಖ ವರ್ಗಾವಣೆಗೊಂಡು ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವವರು ಕನಿಷ್ಠ 5 ವರ್ಷಗಳು ಶಾಲೆಯಲ್ಲಿ ಸೇವೆ ಸಲ್ಲಿಸಿರಬೇಕು.
6. ಅಧಿಸೂಚಿತ 4 ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಈಗಾಗಲೇ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ 10 ವರ್ಷಗಳ ಸೇವೆಯನ್ನು ಸಲ್ಲಿಸಿದ್ದಲ್ಲಿ ಪುನಃ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. [10 ವರ್ಷಗಳ ಸೇವೆ ಎಂದರೆ ಯಾವುದೇ ಹುದ್ದೆಯಲ್ಲಿ ಅಥವಾ ಈ 4 ಹುದ್ದೆಗಳಲ್ಲಿ ಒಟ್ಟಾರೆಯಾಗಿ ಸತತವಾಗಿ ಸಲ್ಲಿಸಿರುವ ಸೇವೆಯೆಂದು ಪರಿಗಣಿಸುವುದು]
7. ಸದರಿ ನಿರ್ದಿಷ್ಟಪಡಿಸಿದ ಹುದ್ದೆಗಳ ಗರಿಷ್ಠ ಅವಧಿ 5 ವರ್ಷಗಳು, ಸದರಿ ಅವಧಿ ಪೂರ್ಣಗೊಳಿಸಿದ ನಂತರ ವರ್ಗಾವಣಾ ನಿಯಮಾನುಸಾರ ಶಾಲೆಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳನಿಯುಕ್ತಿಗೊಳಿಸಲಾಗುವುದು.

8. ಪ್ರಸ್ತುತ ಬಿ.ಆರ್.ಸಿ/ಎ.ಪಿ.ಸಿ.ಒ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು ಮತ್ತು ಸಹಾಯಕ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಆಯಾಯ ಹುದ್ದೆಗಳಲ್ಲಿ 5 ವರ್ಷಗಳ ಸೇವೆಯನ್ನು ಪೂರೈಸಿ ಹೊರಹೋಗುತ್ತಿರುವ ಅಭ್ಯರ್ಥಿಗಳು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನಿರ್ದಿಷ್ಟಪಡಿಸಿದ ಹುದ್ದೆಗೆ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
9. ಬಿ.ಆರ್.ಸಿ/ಎ.ಪಿ.ಸಿ.ಒ (ಸಮಗ್ರ ಶಿಕ್ಷಣ ಕರ್ನಾಟಕ), ವಿಷಯ ಪರಿವೀಕ್ಷಕರು ಮತ್ತು ಸಹಾಯಕ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ) ಈ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ಆಯ್ಕೆಯಾಗದೇ ಕಾರ್ಯ ನಿರ್ವಹಿಸುತ್ತಿರುವವರು ಸದರಿ ಹುದ್ದೆಯಲ್ಲಿ ಮುಂದುವರೆಯಲು ಇಚ್ಛಿಸಿದ್ದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗೆ ಮಾತ್ರ ಪರೀಕ್ಷೆಯನ್ನು ತೆಗೆದುಕೊಂಡು ಉತ್ತೀರ್ಣರಾಗುವುದು ಕಡ್ಡಾಯವಾಗಿರುತ್ತದೆ.
10. ಈ ಹುದ್ದೆಗಳಿಗೆ ಆಯ್ಕೆ ಬಯಸಿ ಅರ್ಜಿಯನ್ನು ಸಲ್ಲಿಸಲು ಇಚ್ಛಿಸಲು ಅಭ್ಯರ್ಥಿಯು ಕಡ್ಡಾಯವಾಗಿ ಇ.ಇ.ಡಿ.ಎಸ್ ನಲ್ಲಿ ತಮ್ಮ ಸಂಪೂರ್ಣ ಮಾಹಿತಿಯನ್ನು ಸಲ್ಲಿಸಿರಬೇಕು.
11. ಇಲಾಖಾ ವಿಚಾರಣೆ/ಶಿಸ್ತು ಪ್ರಕರಣ/ನ್ಯಾಯಾಲಯ ಪ್ರಕರಣ/ಎಸಿಬಿ/ಲೋಕಾಯುಕ್ತ/ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
12. ಈ ಹುದ್ದೆಗಳಿಗೆ ಸ್ಥಳನಿಯುಕ್ತಿಗೊಂಡವರಿಗೆ ಮುಂದಿನ 3 ವರ್ಷಗಳ ಅವಧಿಯೊಳಗೆ ಯಾವುದೇ ಸ್ಥಳ ಬದಲಾವಣೆಗೆ ಅವಕಾಶವಿರುವುದಿಲ್ಲ (ಶಿಸ್ತು ಪ್ರಕರಣಗಳನ್ನು ಹೊರತುಪಡಿಸಿ).
13. ಈ ಹುದ್ದೆಗಳಿಗೆ ಆಯ್ಕೆ ಬಯಸುವ ಅಭ್ಯರ್ಥಿಗಳು ಸರ್ಕಾರದಿಂದ ಮಾನ್ಯತೆ ಪಡೆದ ಯಾವುದೇ ಸಂಘ/ಸಂಸ್ಥೆ ಮತ್ತು ಇತರೆ ಯಾವುದೇ ಸಹಕಾರ ಸಂಘ/ಸಂಸ್ಥೆಗಳ ಚುನಾಯಿತ ಸದಸ್ಯರು, ನಾಮನಿರ್ದೇಶಿತ ಸದಸ್ಯರು, ಅಧ್ಯಕ್ಷರು, ಕಾರ್ಯದರ್ಶಿ, ಖಜಾಂಚಿ, ಪದಾಧಿಕಾರಿಗಳು ಸೇರಿದಂತೆ ಯಾವುದೇ ಹುದ್ದೆಯನ್ನು ಹೊಂದಿರತಕ್ಕದಲ್ಲ. ಒಂದು ವೇಳೆ ಹೊಂದಿದ್ದಲ್ಲಿ ಆ ಹುದ್ದೆಯನ್ನು ತ್ಯಜಿಸಿ ಆ ಬಗ್ಗೆ ಲಿಖಿತ ಮುಚ್ಚಳಿಕೆಯನ್ನು ನೀಡಿದ ನಂತರ ಅರ್ಜಿಯನ್ನು ಸಲ್ಲಿಸತಕ್ಕದ್ದು. ಒಂದು ಬಾರಿ ನಿರ್ದಿಷ್ಟಪಡಿಸಿದ ಹುದ್ದೆಯ ಕರ್ತವ್ಯಕ್ಕೆ ಹಾಜರಾದ ನಂತರ ಮೇಲಿನ ಯಾವುದೇ ಹುದ್ದೆಯನ್ನು ಹೊಂದಲು ಅವಕಾಶವಿರುವುದಿಲ್ಲ.
14. ನಿರ್ದಿಷ್ಟಪಡಿಸಿದ ಹುದ್ದೆಗಳ ಕಾರ್ಯಭಾರಗಳನ್ನು ಅವರ ಜಾಬ್ ಚಾರ್ಟ್‌ನಲ್ಲಿ ಸೂಚಿಸಿರುವಂತೆ ನಿರ್ವಹಿಸಲು ಅಭ್ಯರ್ಥಿಯು ಸದೃಢರಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು. ಗಂಭೀರ ಕಾಯಿಲೆಗಳಿಂದ (ಕ್ಯಾನ್ಸರ್, ಮೂತ್ರ ಪಿಂಡ ವೈಫಲ್ಯ, ಹೃದಯ ಸಂಬಂಧಿತ ಕಾಯಿಲೆಗಳು ಇವೇ ಮುಂತಾದವು) ಬಳಲುತ್ತಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
15. ದೈಹಿಕ ಶಿಕ್ಷಣ ಪರಿವೀಕ್ಷಕರು/ಉಪನ್ಯಾಸಕರು ಹಾಗೂ ವಿಶೇಷ ಶಿಕ್ಷಕರುಗಳಿಗೆ (ಗ್ರೂಪ್–ಬಿ) ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.
16. ಲಿಖಿತ ಪರೀಕ್ಷೆಯಲ್ಲಿ ಅರ್ಹತೆ ಹೊಂದಿ ಕೌನ್ಸಿಲಿಂಗ್‌ಗೆ ಗೈರು ಹಾಜರಾದ ಹಾಗೂ ಕೌನ್ಸಿಲಿಂಗ್ ನಲ್ಲಿ ಸ್ಥಳ ಆಯ್ಕೆ ಮಾಡಿಕೊಂಡ ನಂತರ ಕರ್ತವ್ಯಕ್ಕೆ ಹಾಜರಾಗದಿರುವವರು, ಮುಂದಿನ 05 ವರ್ಷ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
17. ಪ್ರಸ್ತುತ ನಿರ್ದಿಷ್ಟಪಡಿಸಿದ ಹುದ್ದೆಗಳಲ್ಲಿ 05 ವರ್ಷಗಳ ಸೇವೆಯನ್ನು ಪೂರೈಸಿ ಹೊರಹೋಗುತ್ತಿರುವ ಅಭ್ಯರ್ಥಿಗಳು ಅಧಿಸೂಚಿತ ಹುದ್ದೆಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅರ್ಹರಿರುವುದಿಲ್ಲ.
18. ಅರ್ಜಿ ಸಲ್ಲಿಸಿದ ಅಭ್ಯರ್ಥಿಯು ಸ್ಥಳ ನಿಯುಕ್ತಿ ಕೌನ್ಸಿಲಿಂಗ್ ದಿನಾಂಕಕ್ಕೆ ಅರ್ಜಿ ಸಲ್ಲಿಸಿದ ಶಾಲೆಯಲ್ಲಿಯೇ ಕರ್ತವ್ಯ ನಿರ್ವಹಿಸುತ್ತಿರಬೇಕು. ಒಂದು ವೇಳೆ ವರ್ಗಾವಣೆ, ಬಡ್ತಿ ಮತ್ತು ಇನ್ನಿತರೆ ಕಾರಣಗಳಿಂದ ಬೇರೆ ಶಾಲೆಗೆ ಸ್ಥಳ ನಿಯುಕ್ತಿ ಹೊಂದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ ನಿರ್ದಿಷ್ಟಪಡಿಸಿದ ಹುದ್ದೆಯ ಕರ್ತವ್ಯದ ಅವಧಿಯಲ್ಲಿ ತೃಪ್ತಿಕರವಾಗಿ ಕಾರ್ಯನಿರ್ವಹಿಸದೇ ಇರುವ ಅಭ್ಯರ್ಥಿಗಳು ಮುಂದಿನ ಲಿಖಿತ ಪರೀಕ್ಷೆಯನ್ನು ತೆಗೆದುಕೊಳ್ಳಲು ಅರ್ಹರಾಗಿರುವುದಿಲ್ಲ.
19. ಅನ್ಯ ಇಲಾಖೆಯಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ. ಇತರೆ ಸಮಾನಾಂತರ ತಾಂತ್ರಿಕ ಸಹಾಯಕರ ಹುದ್ದೆಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಅರ್ಜಿ ಸಲ್ಲಿಸಲು ಅವಕಾಶವಿರುವುದಿಲ್ಲ.

**ಆಯ್ಕೆ ಪ್ರಕ್ರಿಯೆ:–**

1. ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರು ಧಾರವಾಡ ಮತ್ತು ಅಪರ ಆಯುಕ್ತರು ಕಲಬುರಗಿ ಇವರುಗಳು ಕಾರ್ಯವ್ಯಾಪ್ತಿಯ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಪರೀಕ್ಷೆ ಮತ್ತು ಆಯ್ಕೆ ಪ್ರಕ್ರಿಯೆಯ ಜವಾಬ್ದಾರಿಯನ್ನು ಹೊಂದಿರುತ್ತಾರೆ. ವಿಭಾಗೀಯ ಸಹ ನಿರ್ದೇಶಕರುಗಳು ತಮ್ಮ ಕಾರ್ಯವ್ಯಾಪ್ತಿಯ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಸೂಕ್ತ ಮಾರ್ಗದರ್ಶನ ಮತ್ತು ಮೇಲುಸ್ತುವಾರಿಯನ್ನು ನಿರ್ವಹಿಸತಕ್ಕದ್ದು.
2. ಅಧಿಸೂಚಿತ ಎಲ್ಲಾ ಹುದ್ದೆಗಳ ಆಯ್ಕೆಗೆ ಸಂಬಂಧಿಸಿದಂತೆ ಆಯಾ ಜಿಲ್ಲೆಯ ಡಯಟ್‌ಗಳು ಪರೀಕ್ಷಾ ಕೇಂದ್ರಗಳಾಗಿದ್ದು, ಪ್ರಾಂಶುಪಾಲರು ಹಾಗು ಪದನಿಮಿತ್ತ ಉಪನಿರ್ದೇಶಕರು [ಅಭಿವೃದ್ಧಿ], ಇವರ ಪೂರ್ಣ ಜವಾಬ್ದಾರಿಯೊಂದಿಗೆ ಪರೀಕ್ಷೆ ನಡೆಸುವುದು.
3. ಪರೀಕ್ಷೆಯ ನಂತರ ಮೌಲ್ಯಮಾಪನ ಪಟ್ಟಿಯನ್ನು ನಿರ್ದೇಶಕರು, ಕೆ.ಎಸ್.ಇ.ಎ.ಬಿ–ರವರಿಂದ ಪಡೆದು ಅಭ್ಯರ್ಥಿಗಳ ಹೆಚ್ಚುವರಿ ಅಂಕಗಳನ್ನು ಕ್ರೂಢೀಕರಿಸಿ ತಾತ್ಕಾಲಿಕ ಅಂಕಪಟ್ಟಿಯನ್ನು ಪ್ರಕಟಿಸುವುದು. ಆಕ್ಷೇಪಣೆ ಸ್ವೀಕರಿಸಿ ಅಂತಿಮ ಪಟ್ಟಿಯನ್ನು ಇ–ಆಡಳಿತ ವಿಭಾಗ, ಆಯುಕ್ತರ ಕಛೇರಿ ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಸಹಯೋಗದೊಂದಿಗೆ ಪ್ರಕಟಿಸುವುದು ಆಯಾ ಉಪನಿರ್ದೇಶಕರು[ಆಡಳಿತ]ರವರ ಜವಾಬ್ದಾರಿಯಾಗಿರುತ್ತದೆ.

4. ಅಂತಿಮ ಜೇಷ್ಠತಾ ಪಟ್ಟಿಯನ್ವಯ ಆಯಾಯ ಜಿಲ್ಲಾ ಉಪನಿರ್ದೇಶಕರು [ಆಡಳಿತ]ರವರು ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸುವುದು.
5. ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರು ಧಾರವಾಡ, ಮತ್ತು ಅಪರ ಆಯುಕ್ತರು ಕಲಬುರಗಿ ಇವರ ಆಡಳಿತ ವ್ಯಾಪ್ತಿಯ ಒಂದು ಘಟಕವನ್ನಾಗಿ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗಿದೆ.
6. ಅಂತಿಮ ಅರ್ಹತಾ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಆಯಾಯಾ ಆಯುಕ್ತಾಲಯಗಳು ಕೌನ್ಸಿಲಿಂಗ್ ನಡೆಸುವುದು.

**ಇಲಾಖೆಯ ಅಧಿಕಾರಿಗಳ ಜವಾಬ್ದಾರಿಗಳು:**

1. ಆಯಾಯ ಜಿಲ್ಲಾ ಉಪನಿರ್ದೇಶಕರು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ಅಭ್ಯರ್ಥಿಗಳು ಅನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮಾಹಿತಿ ಮತ್ತು ಲಗತ್ತುಗಳ ನೈಜತೆ ಬಗ್ಗೆ ಪರಿಶೀಲಿಸಿ ಅನುಮೋದಿಸುವುದು.
2. ಅಭ್ಯರ್ಥಿಗಳು ಕನಿಷ್ಠ ಸೇವಾವಧಿಯನ್ನು ಪೂರೈಸಿರುವ ಬಗ್ಗೆ ಸಂಬಂಧಿಸಿದ ಶಿಕ್ಷಕರ ಸೇವಾ ಪುಸ್ತಕಗಳನ್ನು ಪರಿಶೀಲಿಸಿ ದೃಢಪಡಿಸಿಕೊಳ್ಳತಕ್ಕದ್ದು. ಇದರಲ್ಲಿ ಯಾವುದೇ ಲೋಪವಾದಲ್ಲಿ ಸಂಬಂಧಿಸಿದ ಉಪನಿರ್ದೇಶಕರೇ ನೇರಹೊಣೆಗಾರರಾಗಿರುತ್ತಾರೆ.
3. ಆಯಾಯ ಜಿಲ್ಲಾ ಡಯಟ್ ಪ್ರಾಂಶುಪಾಲರುಗಳು ಇಲಾಖೆ ಸುತ್ತೋಲೆ ಮತ್ತು ವೇಳಾಪಟ್ಟಿಯಲ್ಲಿ ತಿಳಿಸಿರುವಂತೆ ನಿರ್ದೇಶಕರು [ಪರೀಕ್ಷೆಗಳು], ಕೆ.ಎಸ್.ಇ.ಎ.ಬಿ, ಮಲ್ಲೇಶ್ವರಂ, ಬೆಂಗಳೂರು-ರವರ ಮಾರ್ಗ ನಿರ್ದೇಶನಗಳನ್ವಯ ಪರೀಕ್ಷೆಯ ಸಂಪೂರ್ಣ ಜವಾಬ್ದಾರಿಯನ್ನು ನಿಭಾಯಿಸುವುದು.
4. ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಿಗೆ ಆಯಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಇವರು ಅಭ್ಯರ್ಥಿಗಳು ಆನ್-ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮಾಹಿತಿ ಮತ್ತು ಲಗತ್ತುಗಳ ನೈಜತೆ ಬಗ್ಗೆ ಪರಿಶೀಲಿಸಿ ಅನುಮೋದಿಸುವುದು. ಅಪೂರ್ಣವಾದ ಅರ್ಜಿಗಳನ್ನು ಉಪನಿರ್ದೇಶಕರ ಹಂತದಲ್ಲಿಯೇ ತಿರಸ್ಕರಿಸುವುದು ಹಾಗೂ ಲಗತ್ತುಗಳ ಮೂಲ ಪ್ರತಿಗಳನ್ನು ಕ್ರಮವಾರು ಜೋಡಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು.

**ಸಾಮಾನ್ಯ ಸೂಚನೆಗಳು:**

1. ಅರ್ಜಿ ಸಲ್ಲಿಸುವ ಮೊದಲು ಅಭ್ಯರ್ಥಿಗಳು ತಮ್ಮ ಸಂಪೂರ್ಣ ಸೇವಾ ವಿವರಗಳನ್ನು ಇಇಡಿಎಸ್‌ನಲ್ಲಿ ಕಡ್ಡಾಯವಾಗಿ ನಮೂದಿಸುವುದು. ಇಇಡಿಎಸ್‌ನಲ್ಲಿ ಸೇವಾ ಮಾಹಿತಿಯನ್ನು ಸಲ್ಲಿಸಿದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
2. ಕಂಪ್ಯೂಟರ್ ಜನರೇಟೆಡ್ ಹಾಜರಾತಿ ಪತ್ರವನ್ನು ಆನ್-ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಪರೀಕ್ಷೆಗೆ ಹಾಜರಾಗುವುದು.
3. **ಮೇಲ್ಕಂಡ ಎಲ್ಲಾ ಅಧಿಸೂಚಿತ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಗಣಕಯಂತ್ರ ಬಳಕೆಯ ಜ್ಞಾನ ಹೊಂದಿರುವುದು ಕಡ್ಡಾಯವಾಗಿರುತ್ತದೆ.**
4. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪರೀಕ್ಷೆ ಬರೆಯಲು ಅದೇ ಜಿಲ್ಲೆಯಲ್ಲಿನ ಡಯಟ್‌ಗಳಿಗೆ ಹಾಜರಾಗುವುದು.
5. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಅಭ್ಯರ್ಥಿಗಳ ಎಲ್ಲಾ ಅಂಕಪಟ್ಟಿಗಳು ಹಾಗೂ ಪ್ರಮಾಣ ಪತ್ರಗಳನ್ನು ಅರ್ಜಿಯ ಜೊತೆಯಲ್ಲಿಯೇ ಅಪ್-ಲೋಡ್ ಮಾಡಬೇಕು.
6. ಪ್ರಮಾಣ ಪತ್ರಗಳ ಪರಿಶೀಲನೆ ಸಮಯದಲ್ಲಿ ಸುಳ್ಳು ದಾಖಲೆ ಅಥವಾ ಮಾಹಿತಿ ನೀಡಿರುವುದು ಕಂಡುಬಂದಲ್ಲಿ ಅಂತಹ ಅಭ್ಯರ್ಥಿಗಳು ಆಯ್ಕೆಯಾಗುವ ಅವಕಾಶವನ್ನು ಕಳೆದುಕೊಳ್ಳುವುದಲ್ಲದೇ ಶಿಸ್ತಿನ ಕ್ರಮಕ್ಕೆ ಒಳಪಡುತ್ತಾರೆ.
7. ಮೇಲಿನ ಆಯ್ಕೆಯು ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ನಿಯಮಗಳು, ಆದೇಶಗಳು ಮತ್ತು ತಿದ್ದುಪಡಿಗೆ ಒಳಪಟ್ಟಿರುತ್ತದೆ.
8. ***ಅಧಿಸೂಚಿತ ಹುದ್ದೆಗಳಿಗೆ ಪರೀಕ್ಷೆ ಬರೆದ ಮಾತ್ರಕ್ಕೆ ಈ ಹುದ್ದೆಗಳ ಆಯ್ಕೆಯ ಮೇಲೆ ಹಕ್ಕು ಹೊಂದಿರುವುದಿಲ್ಲ. ಅಧಿಸೂಚಿತ ಹುದ್ದೆಗಳ ನೇಮಕಾತಿಯ ಆಯ್ಕೆಯನ್ನು ಸಂಪೂರ್ಣವಾಗಿ ಆಯ್ಕೆ ಪ್ರಾಧಿಕಾರಿಗಳಿಗೆ ಕಾಯ್ದಿರಿಸಲಾಗಿದೆ.***
9. ಅರ್ಜಿದಾರರು ನೀಡುವ ಮಾಹಿತಿಯು ಸತ್ಯನಿಷ್ಠವಾಗಿಲ್ಲದಿದ್ದಲ್ಲಿ ಅವರ ಅರ್ಜಿಗಳನ್ನು ತಿರಸ್ಕರಿಸಿ ಅವರ ವಿರುದ್ಧ ಸಿಸಿಎ ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು.
10. ಕರ್ತವ್ಯದ ದಿನದಂದು ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಅನ್ಯ ಕಾರ್ಯನಿಮಿತ್ತ [ಒ.ಒ.ಡಿ] ಸೌಲಭ್ಯ ಒದಗಿಸಿದೆ. ಹಾಜರಾತಿ ಮಾಹಿತಿಯನ್ನು ನಿರ್ದೇಶಕರು [ಕ.ಪ್ರೌ.ಶಿ.ಪ.ಮಂಡಳಿ] ಇವರು ಸಂಬಂಧಿತ ಕಛೇರಿ ಮುಖ್ಯಸ್ಥರಿಗೆ ನೀಡುವುದು.
11. ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ವೆಚ್ಚ ಭರಿಸುವುದು. ಇಲಾಖಾ ವತಿಯಿಂದ ಯಾವುದೇ ಭತ್ಯೆಗಳನ್ನು ಮಂಜೂರು ಮಾಡಲಾಗುವುದಿಲ್ಲ.
12. ಭಾಷಾ ಅಲ್ಪಸಂಖ್ಯಾತ ಮಾಧ್ಯಮದ ಶಿಕ್ಷಕರುಗಳು ತಾಂತ್ರಿಕ ಸಹಾಯಕ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನ್ನಡದಲ್ಲಿ ವ್ಯವಹರಣೆ ಸಾಮರ್ಥ್ಯ ಹೊಂದಿರತಕ್ಕದ್ದು.

## ಅನುಬಂಧ–II

**ಪರೀಕ್ಷಾ ವಿಧಾನ :**

**ನಿರ್ದಿಷ್ಟಪಡಿಸಿದ ಹುದ್ದೆಗಳ ಆಯ್ಕೆಗಾಗಿ ಅಂತಿಮ ಅರ್ಹತಾ ಪಟ್ಟಿಯನ್ನು 200 ಅಂಕಗಳಿಗೆ ಸಿದ್ಧಪಡಿಸಲಾಗುವುದು. ವಿವರ ಕೆಳಕಂಡಂತಿದೆ.**

| ಕ್ರಸಂ | ಪರೀಕ್ಷಾ ವಿಧಾನ | ಅಂಕಗಳು |
|---|---|---|
| I. | ಲಿಖಿತ ಪರೀಕ್ಷೆ ಪತ್ರಿಕೆ–1 | 85 |
| II. | ಲಿಖಿತ ಪರೀಕ್ಷೆ ಪತ್ರಿಕೆ–2 | 85 |
| III. | ಅಭ್ಯರ್ಥಿಗಳ ಹೆಚ್ಚಿನ ವಿದ್ಯಾರ್ಹತೆಗೆ | 20 |
| IV. | ಸೇವಾ ಅನುಭವಕ್ಕೆ | 10 |
| ಒಟ್ಟು | | **200** |

**I ಲಿಖಿತ ಪರೀಕ್ಷೆ :**

ಲಿಖಿತ ಪರೀಕ್ಷೆಯು ಈ ಕೆಳಕಂಡಂತೆ ಎರಡು ಪತ್ರಿಕೆಗಳನ್ನು ಒಳಗೊಂಡಿರುತ್ತದೆ. ಅಭ್ಯರ್ಥಿಗಳು ಲಿಖಿತ ಪರೀಕ್ಷೆಯ ಪತ್ರಿಕೆ–1 ಮತ್ತು ಪತ್ರಿಕೆ–2ರಲ್ಲಿ ಪ್ರತ್ಯೇಕವಾಗಿ ಶೇಕಡಾ 50ರಷ್ಟು ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿದೆ.

1) **ಲಿಖಿತ ಪರೀಕ್ಷೆ ಪತ್ರಿಕೆ–1 (85 ಅಂಕಗಳು)**

ಅ) ಸದರಿ ಪ್ರಶ್ನೆ ಪತ್ರಿಕೆಯು ಬಹು ಆಯ್ಕೆ ಮಾದರಿಯದ್ದಾಗಿದ್ದು (MCQ), ಸಾಮಾನ್ಯ ಜ್ಞಾನ, ಬೋಧನಾ ಶಾಸ್ತ್ರ ಶೈಕ್ಷಣಿಕ ದೃಷ್ಟಿಕೋನಗಳು ಮತ್ತು ಶಿಕ್ಷಣ ಹಾಗೂ ಇಲಾಖೆಯ ಯೋಜನೆಗಳಿಗೆ ಸಂಬಂಧಪಟ್ಟ ಕಾಯ್ದೆ ಮತ್ತು ನಿಯಮಗಳ ವಿಷಯಗಳನ್ನು ಒಳಗೊಂಡಿರುತ್ತದೆ.

2) **ಲಿಖಿತ ಪರೀಕ್ಷೆ ಪತ್ರಿಕೆ–2 (85 ಅಂಕಗಳು)**

ಅ) ಹುದ್ದೆಯ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟ ವಿಷಯಗಳನ್ನು ಒಳಗೊಂಡಿರುತ್ತದೆ.
ಆ) ಸದರಿ ಪ್ರಶ್ನೆ ಪತ್ರಿಕೆಯು ಶೇಕಡಾ 40% ರಷ್ಟು ಬಹು ಆಯ್ಕೆ ಮಾದರಿಯ ಪ್ರಶ್ನೆಗಳನ್ನು ಹಾಗೂ ಶೇಕಡಾ 60% ರಷ್ಟು ವಿವರಣಾತ್ಮಕ ಮಾದರಿಯ ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.
ಇ) 10ನೇ ತರಗತಿಯವರೆಗಿನ ಪಠ್ಯವಸ್ತು, ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಕರ ಶ್ರೇಣಿಯ ಹುದ್ದೆಗಳಿಗೆ ಹಾಗೂ ಹುದ್ದೆಗಳಿಗೆ ಹಾಗೂ ಪ್ರೌಢ ಶಾಲಾ ಮುಖ್ಯ ಶಿಕ್ಷಕರ ತತ್ಸಮಾನ ವೃಂದದ ಹುದ್ದೆಗಳಿಗೆ 12ನೇ ತರಗತಿಯವರೆಗಿನ ಪಠ್ಯವಸ್ತುವು ಪರೀಕ್ಷಾ ವಿಷಯಗಳಾಗಿವೆ.

### II) ಅಭ್ಯರ್ಥಿಗಳ ಹೆಚ್ಚಿನ ವಿದ್ಯಾರ್ಹತೆಗೆ (20 ಅಂಕಗಳು) :

ಗರಿಷ್ಠ 20 ಅಂಕಗಳನ್ನು ಅಭ್ಯರ್ಥಿಗಳ ಹೆಚ್ಚಿನ ವಿದ್ಯಾರ್ಹತೆಗಾಗಿ (ಅಂದರೆ, ಹುದ್ದೆಗೆ ಅಗತ್ಯವಾದ ವಿದ್ಯಾರ್ಹತೆಗಿಂತ ಹೆಚ್ಚಿನದು ಹಂಚಿಕೆ ಮಾಡಿದೆ.

- 15 ಅಂಕಗಳನ್ನು ಪದವಿ, ಸ್ನಾತಕೋತ್ತರ ಪದವಿ, ಎಂ.ಫಿಲ್, ಪಿ.ಹೆಚ್.ಡಿ. ಹಾಗೂ ಶೈಕ್ಷಣಿಕ ಪ್ರಕಟಣೆಗಳನ್ನು ಒಳಗೊಂಡಿರುತ್ತದೆ.
- ಎಲ್ಲಾ ಶ್ರೇಣಿಯ ಅಭ್ಯರ್ಥಿಗಳು ಗಣಕ ಯಂತ್ರದ ಜ್ಞಾನ ಹೊಂದಿರುವುದು ಕಡ್ಡಾಯ, ಯಾವುದೇ ಕಂಪ್ಯೂಟರ್ ಜ್ಞಾನದ ವಿದ್ಯಾರ್ಹತೆಗೆ ಸಂಬಂಧಿಸಿದ ಪ್ರಮಾಣ ಪತ್ರವನ್ನು ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆ ಪ್ರಾಧಿಕಾರದಿಂದ ಪಡೆದಿರತಕ್ಕದ್ದು. ಕಂಪ್ಯೂಟರ್ ಜ್ಞಾನದ ಡಿಪ್ಲೋಮೊ ಅಥವಾ ಪದವಿಗಾಗಿ 5 ಅಂಕಗಳನ್ನು ಮೀಸಲಿಟ್ಟಿದೆ. C L T ಪ್ರಮಾಣ ಪತ್ರವನ್ನು ಅಂಗೀಕರಿಸಲಾಗುವುದು.

**II ಅಭ್ಯರ್ಥಿಗಳು ಹೊಂದಿರಬಹುದಾದ ಹೆಚ್ಚಿನ ವಿದ್ಯಾರ್ಹತೆಗೆ ಅಂಕಗಳನ್ನು ನಿಗಧಿಪಡಿಸುವ ವಿಧಾನ:**

1) **ಪ್ರಾಥಮಿಕ ಶಿಕ್ಷಕರ ತತ್ಸಮಾನ ಶ್ರೇಣಿ: (C.R.P, B.R.P ತಾಂತ್ರಿಕ ಸಹಾಯಕರು ಮತ್ತು E.C.O)**

- ಪದವಿ (ಬಿ.ಎ, ಬಿ.ಎಸ್.ಸಿ, ಬಿ.ಇಡಿ) – 4 ಅಂಕಗಳು
- ಸ್ನಾತಕೋತ್ತರ ಪದವಿ (ಎಂ.ಎ, ಎಂ.ಎಸ್ಸಿ, ಎಂ.ಇಡಿ) – 4 ಅಂಕಗಳು
- ಎಂಫಿಲ್, ಪಿ.ಹೆಚ್.ಡಿ. – 3 ಅಂಕಗಳು
- ಗಣಕ ಯಂತ್ರ ಜ್ಞಾನ – 5 ಅಂಕಗಳು
- ಶೈಕ್ಷಣಿಕ ಪ್ರಕಟಣೆಗಳು ಮತ್ತು ರಾಜ್ಯ ಮಟ್ಟದ ವಾರ್ತಾ ಪತ್ರಿಕೆ/Magazine ಗಳಲ್ಲಿ ಲೇಖನ – 4 ಅಂಕಗಳು

2) **ಪ್ರೌಢಶಾಲಾ ಶಿಕ್ಷಕರ ತತ್ಸಮಾನ ಶ್ರೇಣಿ : (ಬಿ.ಆರ್.ಪಿ, ತಾಂತ್ರಿಕ ಸಹಾಯಕರು ಮತ್ತು ಶಿಕ್ಷಣ ಸಂಯೋಜಕರು) :**
   - ಸ್ನಾತಕೋತ್ತರ ಪದವಿ (ಎಂ.ಎ, ಎಂ.ಎಸ್ಸಿ, ಎಂ.ಇಡಿ) – 5 ಅಂಕಗಳು
   - ಎಂಫಿಲ್, ಪಿ.ಹೆಚ್.ಡಿ. – 5 ಅಂಕಗಳು
   - ಗಣಕ ಯಂತ್ರ ಜ್ಞಾನ – 5 ಅಂಕಗಳು
   - ಶೈಕ್ಷಣಿಕ ಪ್ರಕಟಣೆಗಳು ಮತ್ತು ರಾಜ್ಯ ಮಟ್ಟದ ವಾರ್ತಾ ಪತ್ರಿಕೆ/Magazine ಗಳಲ್ಲಿ ಲೇಖನ – 5 ಅಂಕಗಳು

3) **ಪ್ರೌಢಶಾಲಾ ಮುಖ್ಯೋಪಾಧ್ಯಾಯರ ತತ್ಸಮಾನ ಶ್ರೇಣಿ : ("ಬಿ" ಗುಂಪು) :**
   - ಸ್ನಾತಕೋತ್ತರ ಪದವಿ (ಎಂ.ಎ, ಎಂ.ಎಸ್ಸಿ, ಎಂ.ಇಡಿ) – 5 ಅಂಕಗಳು
   - ಎಂಫಿಲ್, ಪಿ.ಹೆಚ್.ಡಿ. – 5 ಅಂಕಗಳು
   - ಗಣಕ ಯಂತ್ರ ಜ್ಞಾನ – 5 ಅಂಕಗಳು
   - ಶೈಕ್ಷಣಿಕ ಪ್ರಕಟಣೆಗಳು ಮತ್ತು ರಾಜ್ಯ ಮಟ್ಟದ ವಾರ್ತಾ ಪತ್ರಿಕೆ Magazine ಗಳಲ್ಲಿ ಲೇಖನ – 5 ಅಂಕಗಳು

**III) ಸೇವಾ ಅನುಭವಕ್ಕೆ (10 ಅಂಕಗಳು):**
   - ಪ್ರತಿ 2 ವರ್ಷದ ಪೂರ್ಣಗೊಂಡ ಸೇವೆಗೆ 1 ಅಂಕದಂತೆ ಗರಿಷ್ಠ 10 ಅಂಕಗಳನ್ನು ಮೀರದಂತೆ.

## ಅನುಬಂಧ– III

**I) ನಿರ್ದಿಷ್ಟಪಡಿಸಿದ ಹುದ್ದೆಯ ಲಿಖಿತ ಪರೀಕ್ಷೆಗೆ ಪಠ್ಯಕ್ರಮ:**

1. **ಪ್ರಾಥಮಿಕ ಶಿಕ್ಷಕರ ತತ್ಸಮಾನ ಶ್ರೇಣಿ: (C.R.P, B.R.P ತಾಂತ್ರಿಕ ಸಹಾಯಕರು ಮತ್ತು E.C.O)**
   a) ಭಾಷೆ–1 (ಕನ್ನಡ, ಉರ್ದು, ಮರಾಠಿ, ತೆಲುಗು ಮತ್ತು ತಮಿಳು)
   b) ಭಾಷೆ–2 (ಇಂಗ್ಲೀಷ್)
   **ಕೋರ್ ವಿಷಯಗಳು:** (ಗಣಿತ, ಸಾಮಾನ್ಯ ವಿಜ್ಞಾನ ಮತ್ತು ಪರಿಸರ ಅಧ್ಯಯನ ಹಾಗೂ ಸಮಾಜ ವಿಜ್ಞಾನ)
   c) ಸಾಮಾನ್ಯ ಜ್ಞಾನ
   d) ಬೋಧನಾ ಶಾಸ್ತ್ರ
   e) ಪ್ರಚಲಿತ ಶೈಕ್ಷಣಿಕ ಕಾರ್ಯಕ್ರಮಗಳು

2. **ಪ್ರೌಢಶಾಲಾ ಶಿಕ್ಷಕರ ತತ್ಸಮಾನ ಶ್ರೇಣಿ : (ಬಿ.ಆರ್.ಪಿ, ತಾಂತ್ರಿಕ ಸಹಾಯಕರು ಮತ್ತು ಶಿಕ್ಷಣ ಸಂಯೋಜಕರು)**
   1) ಭಾಷೆ–1 (ಕನ್ನಡ)
   2) ಭಾಷೆ–2 (ಇಂಗ್ಲೀಷ್)
   **ಕೋರ್ ವಿಷಯಗಳು**
   3) ಕಲಾ ವಿಷಯಗಳು (ಇತಿಹಾಸ, ಭೂಗೋಳ, ಪೌರನೀತಿ ಮತ್ತು ಅರ್ಥಶಾಸ್ತ್ರ)
   4) ವಿಜ್ಞಾನ ವಿಷಯಗಳು (ಭೌತಶಾಸ್ತ್ರ, ರಸಾಯನ ಶಾಸ್ತ್ರ, ಜೀವಶಾಸ್ತ್ರ ಮತ್ತು ಗಣಿತ)
   5) ಸಾಮಾನ್ಯ ಜ್ಞಾನ
   6) ಬೋಧನಾ ಶಾಸ್ತ್ರ
   7) ಪ್ರಚಲಿತ ಶೈಕ್ಷಣಿಕ ಕಾರ್ಯಕ್ರಮಗಳು

3. **ಪ್ರೌಢಶಾಲಾ ಮುಖ್ಯೋಪಾಧ್ಯಾಯರ ತತ್ಸಮಾನ ಶ್ರೇಣಿ : ("ಬಿ" ಗುಂಪು)**

**ಪತ್ರಿಕೆ – 1**

**ಪ್ರೌಢಶಾಲಾ ಮುಖ್ಯೋಪಾಧ್ಯಾಯರ ವೃಂದದ ಅಧಿಕಾರಿಗಳಿಗೆ ಪತ್ರಿಕೆ–1 ಸಾಮಾನ್ಯವಾಗಿರುತ್ತದೆ.**

1) ಸಾಮಾನ್ಯ ಕನ್ನಡ
2) ಸಾಮಾನ್ಯ ಇಂಗ್ಲೀಷ್
3) ಸಾಮಾನ್ಯ ಜ್ಞಾನ
4) ಬೋಧನಾ ಶಾಸ್ತ್ರ
5) ಪ್ರಚಲಿತ ಶೈಕ್ಷಣಿಕ ಕಾರ್ಯಕ್ರಮಗಳು
6) ಶಿಕ್ಷಣ ನೀತಿ, ಶಿಕ್ಷಣ ಕಾಯ್ದೆಗಳು
7) ಸಿ.ಸಿ.ಎ, KCSR's, ಶೈಕ್ಷಣಿಕ ಆಡಳಿತ.

**ಪತ್ರಿಕೆ – 2 :**

1. **ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ (ಬಿ.ಆರ್.ಪಿ.):**
   - ಹುದ್ದೆಯ ವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳು, ವಿಶೇಷವಾಗಿ ಸಮಗ್ರ ಶಿಕ್ಷಣ ಕರ್ನಾಟಕ SATS ತಂತ್ರಾಂಶದ ಬಗ್ಗೆ, ಸೇವಾನಿರತ ತರಬೇತಿ, ಗುಣಮಟ್ಟ ಸಾಧಿಸಲು ಉಪಕ್ರಮಗಳು (Quality Initiatives), ಮೌಲ್ಯಾಂಕನ (Assessment) etc.

2. **ವಿಷಯ ಪರಿವೀಕ್ಷಕರು:**
   1) ಹುದ್ದೆಯ ವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳು
   2) ಬೋಧನಾ ಶಾಸ್ತ್ರ.

3. **ಸಹಾಯಕ ನಿರ್ದೇಶಕರು (ಮಧ್ಯಾಹ್ನ ಉಪಹಾರ ಯೋಜನೆ):**
   1) ಆಹಾರ, ಪೌಷ್ಠಿಕತೆ ಮತ್ತು ಆರೋಗ್ಯ
   2) ಸ್ವಚ್ಛತೆ, ನೈರ್ಮಲ್ಯ ಮತ್ತು ಮಕ್ಕಳ ಸುರಕ್ಷತೆ
   3) ಮಧ್ಯಾಹ್ನ ಉಪಹಾರ ಯೋಜನೆ (MDM) ಯೋಜನೆಯ ಬಗ್ಗೆ ಅರಿವು
   4) ಸ್ವಯಂ ಸೇವಾ ಸಂಸ್ಥೆಗಳ ಪಾತ್ರ – ಅವರೊಂದಿಗೆ ಸಂಯೋಜನೆ ಮತ್ತು ಲೆಕ್ಕಪತ್ರಗಳ ನಿರ್ವಹಣೆ.

4. **ಸಹಾಯಕ ಸಮನ್ವಯಾಧಿಕಾರಿಗಳು** (ಎ.ಪಿ.ಸಿ.) **: ಸಮಗ್ರ ಶಿಕ್ಷಣ ಕರ್ನಾಟಕ:**

**(1) ಶಾಲೆಯಿಂದ ಹೊರಗುಳಿದ ಮಕ್ಕಳ ಕಾರ್ಯಕ್ರಮ (OOSC)**

a) ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸುವುದು "ಶಾಲಾ ಸಮೀಕ್ಷೆ, ಕುಟುಂಬ ಸಮೀಕ್ಷೆ, ಶಾಲೆ ಮತ್ತು ಗ್ರಾಮ ಶಿಕ್ಷಣ ವಹಿ ನಿರ್ವಹಣೆ."

b) ಮಾಹಿತಿ ಸಂಗ್ರಹಣೆ ಮತ್ತು ಅಂಕಿ ಅಂಶಗಳನ್ನು ವಿಶ್ಲೇಷಿಸುವುದು.

c) ಮುಖ್ಯ ವಾಹಿನಿಗೆ ತರಲು ಕಾರ್ಯಕ್ರಮಗಳನ್ನು ಆಯೋಜಿಸುವುದು "ಶಾಲಾಧಾರಿತ ತರಬೇತಿ, ಋತುಮಾನ ಶಾಲೆಗಳು" ಟೆಂಟ್ ಶಾಲೆ, ಸಾರಿಗೆ ಮತ್ತು ಬೆಂಗಾವಲು ಭತ್ಯೆ, ತರಬೇತಿ, ಹಾಜರಾತಿ ಪ್ರಾಧಿಕಾರ ಇತ್ಯಾದಿ.

**(2) ವಿಶೇಷ ಅಗತ್ಯವುಳ್ಳ ಮಕ್ಕಳ (CWSN) – ಸಮನ್ವಯ ಶಿಕ್ಷಣ:**

a) ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಗುರುತಿಸುವುದು.

b) ಮಾಹಿತಿ ಸಂಗ್ರಹಣೆ ಮತ್ತು ಅಂಕಿ ಅಂಶಗಳನ್ನು ವಿಶ್ಲೇಷಿಸುವುದು.

c) ನ್ಯೂನತೆಯ ವಿಧಗಳು –RPWD ACT 2016

d) ಕಾರ್ಯಕ್ರಮಗಳು "ಎಸ್ ಆರ್ ಪಿ ಕೇಂದ್ರಗಳು, ಗೃಹಧಾರಿತ ಶಿಕ್ಷಣ, ವೈದ್ಯಕೀಯ

e) ತಪಾಸಣಾ ಶಿಬಿರ, ಉಪಕರಣಗಳು ಹಾಗೂ ಬೆಂಗಾವಲು ಮತ್ತು ಇತರ ಭತ್ಯೆಗಳು".

f) ಬಿ.ಐ.ಇ.ಆರ್.ಟಿ ಯ ಕರ್ತವ್ಯ ಮತ್ತು ಜವಾಬ್ದಾರಿಗಳು

g) ಭಾರತೀಯ ಪುನರ್ ವಸತಿ ಮಂಡಳಿ (RCI)

h) ವಿಶೇಷ ಶಾಲೆಗಳು.

**(3) ಶೈಕ್ಷಣಿಕ ತಂತ್ರಾಂಶಗಳು ಮತ್ತು ಮಾಧ್ಯಮಗಳು :**

a) ವಿದ್ಯಾಂಜಲಿ PORTAL

b) U-DISE+

c) SATS, ದೀಕ್ಷಾ, ಎ.ಎಂ.ಎಸ್, ವಿದ್ಯಾವಾಹಿನಿ, ಪ್ರಬಂದ ಪೋರ್ಟಲ್, ಆನ್‌ಲೈನ್ ಸಂಪರ್ಕ ಸೌಲಭ್ಯಗಳು

d) Digital Initiatives (Radio, TV, Computer)

**(4) ಗುಣಮಟ್ಟದ ಮಧ್ಯವರ್ತನೆಗಳು :**

a) ನಲಿ–ಕಲಿ

b) ವಿದ್ಯಾಪ್ರವೇಶ ಮತ್ತು ಕಲಿಕಾ ಚೇತರಿಕೆ

c) ಶಿಕ್ಷಕರ ತರಬೇತಿಗಳು "ನಿಷ್ಠಾ 1,2,3,4, EMTIP- 1, 2, 3, ನಲಿ–ಕಲಿ ತರಬೇತಿ, ELDP

d) PDP, TALP, ಸಂಜ್ಞೆ ತರಬೇತಿ, ಜೀವನ ಕೌಶಲ್ಯ, SDMC , INSPIRE AWARD

e) ವಿಜ್ಞಾನ ಕೇಂದ್ರಗಳು, ಅಟಲ್ ಟಿಂಕರಿಂಗ್ ಲ್ಯಾಬ್

f) KOER, RIE, SISLEP, ಓದು ಕರ್ನಾಟಕ, ಗಣಿತ ಕಲಿಕಾಂದೋಲನ

(5) **ಸಮುದಾಯ ಭಾಗಿತ್ವ :**

a) ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ
b) ಸ್ವಯಂ ಸೇವಾ ಸಂಸ್ಥೆಗಳು
c) ಸಮುದಾಯದತ್ತ ಶಾಲೆ
d) ಶಾಲಾ ದತ್ತು ಯೋಜನೆ
e) ನನ್ನ ಶಾಲೆ ನನ್ನ ಕೊಡುಗೆ
f) ಸಿ.ಎಸ್.ಆರ್ ನಿಧಿ

(6) **ಶಿಕ್ಷಣ ಇಲಾಖೆಯ ಸಂರಚನೆ :**

a) ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
b) ಆಯುಕ್ತಾಲಯಗಳು
c) ಶಿಕ್ಷಣ ಇಲಾಖೆಯ ವಿವಿಧ ನಿರ್ದೇಶನಾಲಯಗಳು ಹಾಗೂ ವಿಭಾಗೀಯ ಜಂಟಿ ನಿರ್ದೇಶನಾಲಯಗಳು
d) ಸಿ.ಟಿ.ಇ ಡಯಟ್, ಬಿ.ಆರ್.ಸಿ, ಸಿ .ಆರ್. ಸಿ

(7) **ಲಭ್ಯತೆ :**

a) ಹೊಸ ಶಾಲೆಗಳು
b) ಕರ್ನಾಟಕ ಪಬ್ಲಿಕ್ ಶಾಲೆ
c) ಆಂಗ್ಲ ಮಾಧ್ಯಮ ಶಾಲೆ
d) ಕೆ.ಜಿ.ಬಿ.ವಿ & ಕೆ.ಕೆ.ಜಿ.ಬಿ.ವಿ
e) ಆದರ್ಶ ಶಾಲೆ
f) ನೇತಾಜಿ ಸುಭಾಷ್ ಚಂದ್ರ ಬೋಸ್ ಸನಿವಾಸಿ ವಿದ್ಯಾಲಯ
g) ಇತರೆ ಇಲಾಖೆಗಳ ವಸತಿ ಶಾಲೆಗಳು

(8) **ಮೂಲಭೂತ ಸೌಕರ್ಯಗಳು:**

a) ಶಾಲಾ ಕೊಠಡಿಗಳು, ಶೌಚಾಲಯಗಳು, RAMPs, ವಿದ್ಯುತ್ ಶಕ್ತಿ, ಕುಡಿಯುವ ನೀರು,
b) BALA, ಶಾಲಾ ಆಸ್ತಿ ಸಂರಕ್ಷಣೆ

(9) **ಸಹ ಸಂಬಂಧ ಇಲಾಖೆಗಳು:**

a) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಾನೂನು ಇಲಾಖೆ, ಕಾರ್ಮಿಕ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಅಂಗವಿಕಲರ ಸಬಲೀಕರಣ ಇಲಾಖೆ, ಅಲ್ಪಸಂಖ್ಯಾತರ ಇಲಾಖೆ, ಲೋಕೋಪಯೋಗಿ ಇಲಾಖೆ, ಆರೋಗ್ಯ ಇಲಾಖೆ, ಪಂಚಾಯತ್ ರಾಜ್ ಮತ್ತು ನಗರಾಭಿವೃದ್ಧಿ ಇಲಾಖೆ, ಮಕ್ಕಳ ರಕ್ಷಣಾ ಹಕ್ಕು ಆಯೋಗ.

(10) **ಸಹ ಸಂಬಂಧ ಕಾಯ್ದೆಗಳು:**

a) ಶಿಕ್ಷಣ ಹಕ್ಕು ಕಾಯ್ದೆ 2009
b) ಶಿಕ್ಷಣ ಹಕ್ಕು ಕಾಯ್ದೆ 2012
c) ಮಾಹಿತಿ ಹಕ್ಕು ಕಾಯ್ದೆ 2005
d) ಸಕಾಲ
e) ರಾಷ್ಟ್ರೀಯ ಶಿಕ್ಷಣ ನೀತಿ 2020

(11) **ವಿವಿಧ ಶೈಕ್ಷಣಿಕ ಪ್ರೋತ್ಸಾಹಕಗಳು:**

a) ಉಚಿತ ಸಮವಸ್ತ್ರ, ಉಚಿತ ಪಠ್ಯಪುಸ್ತಕ, ಉಚಿತ ಅಭ್ಯಾಸ ಪುಸ್ತಕ, ಉಚಿತ ಬೈಸಿಕಲ್ ಶೂ ಮತ್ತು ಸಾಕ್ಸ್, ವಿದ್ಯಾರ್ಥಿವೇತನ
b) ಮಧ್ಯಾಹ್ನದ ಬಿಸಿ ಊಟ "ಕ್ಷೀರಭಾಗ್ಯ
c) TBF, SWF

(12) **ಸಂಶೋಧನೆ ಮತ್ತು ಮೌಲ್ಯಮಾಪನ:**

a) KSEAB, KSQAAC, NAS, CSAS, ASER, NTSE, NMMS & CCE
b) Action Research, case study, field study & surveys
c) ಶಾಲೆಗಳಲ್ಲಿ ನಿರ್ವಹಿಸ ಬೇಕಾದ ದಾಖಲೆಗಳು ಮತ್ತು ಶಾಲಾ ಆಸ್ತಿ ಸಂರಕ್ಷಣೆ

(13) **ಗುಣಮಟ್ಟದ ಸೂಚ್ಯಂಕಗಳು:**

a) GER, NER, PTR & CTR, ANER, GPI

(14) **ವಿನೂತನ ಕಾರ್ಯಕ್ರಮಗಳು:**

a) ಶಾಲೆಯ ವಿವಿಧ ಕ್ಲಬ್‌ಗಳು ವಿಜ್ಞಾನ ಕ್ಲಬ್, ರೆಡ್ ರಿಬ್ಬನ್ ಕ್ಲಬ್, ಇಕೋ ಕ್ಲಬ್, ಭಾಷಾ ಕ್ಲಬ್, ELC, ಇತ್ಯಾದಿ

b) ಸ್ವಚ್ಛ ವಿದ್ಯಾಲಯ ಪುರಸ್ಕಾರ

c) ಏಕ ಭಾರತ ಶ್ರೇಷ್ಠ ಭಾರತ

d) ಕರ್ನಾಟಕ ದರ್ಶನ

e) ವಿಜ್ಞಾನ ವಸ್ತು ಪ್ರದರ್ಶನ

f) ಪರೀಕ್ಷೆ ಪೇ ಚರ್ಚಾ

g) ಹದಿಹರೆಯದ ಹೆಣ್ಣು ಮಕ್ಕಳ ಕಾರ್ಯಕ್ರಮಗಳು, ಮೀನಾ ಕ್ಲಬ್, ಕಿಶೋರಿ

h) ಕಲಿಕಾ ಹಬ್ಬ , ಪ್ರತಿಭಾ ಕಾರಂಜಿ

(15) **ಯೋಜನೆಗಳು ಮತ್ತು ಅನುದಾನಗಳು:**

a) ಶಾಲಾಭಿವೃದ್ಧಿ ಯೋಜನೆ (SDP)

b) ಶಾಲಾ ಶೈಕ್ಷಣಿಕ ಯೋಜನೆ (SAP)

c) ಶಾಲಾ ದಾಖಲೆಗಳು

d) ಶಾಲಾ ಅನುದಾನಗಳು.

(16) **ಕಾಯ್ದೆ ಮತ್ತು ನಿಯಮಗಳು:**

a) RTE, RTI, SAKALA ACT, NEP 2020, NCP / KCF, KTPP ACT, POCSO ACT 2012 & RPWD ACT 2016

(17) **ಸಂಪನ್ಮೂಲಗಳು:**

a) Ssk Website, School Education Karnataka Website, DSERT website, MDM website. KSEAB, Moe, NITI Ayoga.

## : ವೇಳಾಪಟ್ಟಿ :–

**ಸರ್ಕಾರಿ ಪ್ರಾಥಮಿಕ/ಪ್ರೌಢಶಾಲಾ ಸಹಶಿಕ್ಷಕರು ಮತ್ತು ಮುಖ್ಯ ಶಿಕ್ಷಕರು/ತತ್ಸಮಾನ ವೃಂದದ ಹುದ್ದೆಗಳಿಗೆ.**

| ಕ್ರ ಸಂ | ವಿವರ | ಕ್ರಮವಹಿಸುವವರು. | ದಿನಾಂಕ ಮತ್ತು ಸಮಯ |
|---|---|---|---|
| 1 | ಅಧಿಕೃತ ಜ್ಞಾಪನ ಹೊರಡಿಸುವುದು, [ಶಾಲಾಶಿಕ್ಷಣ ಇಲಾಖೆಯ ಅಧಿಕೃತ ಇಲಾಖಾ ವೆಬ್‌ಸೈಟ್‌ನಲ್ಲಿ] | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು. | 16/12/2023 |
| 2 | ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು [ವಿದ್ಯಾರ್ಹತೆ ಹಾಗೂ ವೈಟೇಜ್‌ಗೆ ಸಂಬಂದಿಸಿದ ಲಗತ್ತುಗಳನ್ನು ಸಹ ಅಭ್ಯರ್ಥಿಗಳೇ ಆನ್‌ಲೈನ್‌ನಲ್ಲಿಯೇ ಅಪ್‌ಲೋಡ್‌ಮಾಡುವುದು]. | ಅಭ್ಯರ್ಥಿಗಳು | 18/12/2023 ರಿಂದ 30/12/2023 |
| 3 | ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಸೇವಾನುಭವ ಮತ್ತು ಹೆಚ್ಚಿನ ವಿದ್ಯಾರ್ಹತೆಗೆ ನಿಗಧಿಪಡಿಸಿರುವ ಅಂಕಗಳನ್ನು ಮತ್ತು ಅರ್ಹತೆಯನ್ನು ಪರಿಶೀಲಿಸಿ ಅರ್ಜಿಗಳ ಅನುಮೋದನೆ ನೀಡುವುದು. | ಉಪನಿರ್ದೇಶಕರು [ಆಡಳಿತ] | 01/01/2024 ರಿಂದ 02/01/2024 |
| 4 | ನಿರ್ದೇಶಕರು, ಕೆ.ಎಸ್.ಇ.ಎ.ಬಿ ರವರಿಗೆ ಪ್ರಶ್ನೆ ಪತ್ರಿಕೆ ಬೇಡಿಕೆ ಕಳುಹಿಸುವುದು ಮತ್ತು ಅರ್ಹ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರಿಗೆ ಕಳುಹಿಸುವುದು. | ಇ–ಆಡಳಿತ ಘಟಕ. ಆಯುಕ್ತರ ಕ್ಛೇರಿ, ಬೆಂಗಳೂರು | 08/01/2024 |
| 5 | ಪ್ರಶ್ನೆ ಪ್ರತಿಕೆಗಳನ್ನು ಪರೀಕ್ಷಾ ಕೇಂದ್ರಗಳಿಗೆ ರವಾನಿಸುವುದು. | ನಿರ್ದೇಶಕರು ಕೆ.ಎಸ್.ಇ.ಇ.ಬಿ, ಬೆಂಗಳೂರು. | **03/02/2024** |
| 6 | **ಪ್ರಾಥಮಿಕ & ಪ್ರೌಢ ಶಾಲಾ ಶಿಕ್ಷಕರಿಗೆ** **ಲಿಖಿತ ಪರೀಕ್ಷೆ 1 (ಪತ್ರಿಕೆ–1)** 1. ಸಿ.ಆರ್.ಪಿ, ಬಿ.ಆರ್.ಪಿ, ತಾಂತ್ರಿಕ ಸಹಾಯಕರು ಮತ್ತು ಶಿಕ್ಷಣ ಸಂಯೋಜಕರು [ಪ್ರಾಥಮಿಕ] 2. ಬಿ.ಆರ್.ಪಿ[ಕಲಾ], [ವಿಜ್ಞಾನ], ತಾಂತ್ರಿಕ ಸಹಾಯಕರು ಮತ್ತು ಶಿಕ್ಷಣ ಸಂಯೋಜಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **04/02/2024** ಬೆಳಿಗ್ಗೆ 10–30 ರಿಂದ 12–30 ರವರೆಗೆ |

| | | | |
|---|---|---|---|
| 7 | <u>ಲಿಖಿತ ಪರೀಕ್ಷೆ 2 (ಪತ್ರಿಕೆ–2)</u><br>1. ಸಿ.ಆರ್.ಪಿ [ಪ್ರಾಥಮಿಕ]<br>2. ಬಿ.ಆರ್.ಪಿ [ಕಲಾ] & [ವಿಜ್ಞಾನ]–[ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **04/02/2024**<br>ಮಧ್ಯಾಹ್ನ 2–00<br>ರಿಂದ<br>04–30 ರವರೆಗೆ |
| 8 | <u>ಲಿಖಿತ ಪರೀಕ್ಷೆ 3 (ಪತ್ರಿಕೆ–2)</u><br>1. ಬಿ.ಆರ್.ಪಿ [ಪ್ರಾಥಮಿಕ]<br>2. ಶಿಕ್ಷಣ ಸಂಯೋಜಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **05/02/2024**<br>ಬೆಳಿಗ್ಗೆ 10–30<br>ರಿಂದ 12–30 ರವರೆಗೆ |
| 9 | <u>ಲಿಖಿತ ಪರೀಕ್ಷೆ 4 (ಪತ್ರಿಕೆ–2)</u><br>1. ಶಿಕ್ಷಣ ಸಂಯೋಜಕರು [ಪ್ರಾಥಮಿಕ]<br>2. ತಾಂತ್ರಿಕ ಸಹಾಯಕರು [ಪ್ರಾಥಮಿಕ]<br>3. ತಾಂತ್ರಿಕ ಸಹಾಯಕರು [ಪ್ರೌಢ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **05/02/2024**<br>ಮಧ್ಯಾಹ್ನ 2–00<br>ರಿಂದ<br>04–30 ರವರೆಗೆ |
| 10 | <u>**ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರ ವೃಂದಕ್ಕೆ**</u><br><u>**ಲಿಖಿತ ಪರೀಕ್ಷೆ 1 (ಪತ್ರಿಕೆ–1)**</u><br>1. ವಿಷಯ ಪರಿವೀಕ್ಷಕರು.<br>2. ಸಹಾಯಕ ನಿರ್ದೇಶಕರು [ಮ.ಉ.ಯೋಜನೆ],<br>3. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ.<br>4. ಎ.ಪಿ.ಸಿ [ಎಸ್.ಎಸ್.ಎ&ಆರ್.ಎಂ.ಎಸ್.ಎ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **04/02/2024**<br>ಬೆಳಿಗ್ಗೆ 10–30<br>ರಿಂದ<br>12–30 ರವರೆಗೆ |
| 11 | <u>ಲಿಖಿತ ಪರೀಕ್ಷೆ–2 (ಪತ್ರಿಕೆ–2)</u><br>1. ವಿಷಯ ಪರಿವೀಕ್ಷಕರು. | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **05/02/2024**<br>ಬೆಳಿಗ್ಗೆ 10–30<br>ರಿಂದ<br>12–30 ರವರೆಗೆ |
| 12 | <u>ಲಿಖಿತ ಪರೀಕ್ಷೆ–3 (ಪತ್ರಿಕೆ–2)</u><br>1.ಸಹಾಯಕ ನಿರ್ದೇಶಕರು [ಮಧ್ಯಾಹ್ನ ಉಪಹಾರ ಯೋಜನೆ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **05/02/2024**<br>ಮಧ್ಯಾಹ್ನ 2–00<br>ರಿಂದ<br>04–30 ರವರೆಗೆ |
| 13 | <u>ಲಿಖಿತ ಪರೀಕ್ಷೆ–4 (ಪತ್ರಿಕೆ–2)</u><br>1. ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ [ಬಿ.ಆರ್.ಸಿ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **06/02/2024**<br>ಬೆಳಿಗ್ಗೆ 10–30<br>ರಿಂದ<br>12–30 ರವರೆಗೆ |
| | <u>ಲಿಖಿತ ಪರೀಕ್ಷೆ–5 (ಪತ್ರಿಕೆ–2)</u><br>1. ಎ.ಪಿ.ಸಿ.ಓ [ಎಸ್.ಎಸ್.ಎ & ಆರ್.ಎಂ.ಎಸ್.ಎ] | ಆಯಾ ಜಿಲ್ಲಾ ಡಯಟ್ ಪ್ರಾಂಶುಪಾಲರು | **06/02/2024**<br>ಮಧ್ಯಾಹ್ನ 2–00<br>ರಿಂದ<br>04–30 ರವರೆಗೆ |
| 14 | ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಅಂತಿಮ ಫಲಿತಾಂಶ ಪಟ್ಟಿಯನ್ನು ಆಯುಕ್ತರು ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು ರವರಿಗೆ ನೀಡುವುದು. | ನಿರ್ದೇಶಕರು ಕೆ.ಎಸ್.ಇ.ಇ.ಬಿ | 20/02/2024 |
| 15 | ಅಭ್ಯರ್ಥಿಗಳ ಸೇವಾನುಭವ ಮತ್ತು ಹೆಚ್ಚಿನ ವಿದ್ಯಾರ್ಹತೆಗೆ ಲಭ್ಯವಾಗುವ ಅಂಕಗಳಿಗೆ ಪರೀಕ್ಷಾ ಫಲಿತಾಂಶದ ಅಂಕಗಳನ್ನು ಕ್ರೂಢೀಕರಿಸಿ **ಎಲ್ಲಾ ವೃಂದದ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ಪ್ರಕಟಣೆ.** | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 23/02/2024 |
| 16 | ತಾತ್ಕಾಲಿಕ ಪಟ್ಟಿಗೆ ಅಭ್ಯರ್ಥಿಗಳಿಂದ ಆಕ್ಷೇಪಣೆ ಸ್ವೀಕರಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 26/02/2024<br>ರಿಂದ<br>27/02/2024 |
| 17 | ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ. ಹಾಗೂ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಆಕ್ಷೇಪಣೆಗಳನ್ನು ಸರಿಪಡಿಸಿದ ನಂತರ ಅರ್ಹ ಪಟ್ಟಿಯನ್ನು ಕ್ರೂಢೀಕರಣಕ್ಕಾಗಿ ಆಯಾ ಆಯುಕ್ತಾಲಯಗಳಿಗೆ ಕಳುಹಿಸುವುದು. | ಆಯಾ ಜಿಲ್ಲಾ ಉಪನಿರ್ದೇಶಕರು [ಆಡಳಿತ] | 01/03/2024 |
| 18 | ಕ್ರ.ಸಂ.17 ರಂತೆ ಸ್ವೀಕೃತವಾಗಿರುವ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಜಿಲ್ಲಾ ಹಂತದ ಅಂತಿಮ ಪಟ್ಟಿಗಳನ್ನು ನಿಯಮಾನುಸಾರ ವಿಭಾಗ ಮಟ್ಟಕ್ಕೆ ಕ್ರೋಢೀಕರಣ ಮತ್ತು ಅಂತಿಮ ಅರ್ಹತಾ ಪಟ್ಟಿ ಪ್ರಕಟಣೆ | 1. ಇ-ಆಡಳಿತ ವತಿಯಿಂದ ಜಿಲ್ಲಾ ಪಟ್ಟಿಗಳನ್ನು ಮೇಲಿನ ಆಧಾರದಲ್ಲಿ ವಿಭಾಗ ಮಟ್ಟದಲ್ಲಿ ತಂತ್ರಾಂಶದಲ್ಲಿ ಕ್ರೋಢೀಕರಣ ಮತ್ತು ಪ್ರಾಧಿಕಾರಿಯವರಿಗೆ ಪ್ರಕಟಣೆಗೆ ಪಟ್ಟಿ ನೀಡುವುದು | 02/03/2024 |

| | | | |
|---|---|---|---|
| | | 2. ಆಯುಕ್ತರು ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಹಾಗೂ ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ | |
| 19 | ಎಲ್ಲಾ ವೃಂದದ ಖಾಲಿ ಹುದ್ದೆಗಳ ಪ್ರಕಟಣೆ | ಇ–ಆಡಳಿತ ಘಟಕ. ಆಯುಕ್ತರ ಕಛೇರಿ, ಬೆಂಗಳೂರು | 04/03/2024 |
| 20 | ಪ್ರಾಥಮಿಕ, ಪ್ರೌಢ, ಹಾಗೂ ಗ್ರೂಪ್–ಬಿ ವೃಂದದ ಅಧಿಸೂಚಿತ ಹುದ್ದೆಗಳಿಗೆ ಲಿಖಿತ ಪರೀಕ್ಷೆ ಮೂಲಕ ನಿಗಧಿಪಡಿಸಿರುವ ಹುದ್ದೆಗಳಿಗೆ ಒಳಬರುವ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್. | 1. ಪ್ರಾಥಮಿಕ ಮತ್ತು ಪ್ರೌಢಶಾಲಾ ಸಹಶಿಕ್ಷಕರ ವೃಂದದ ಹುದ್ದೆಗಳಿಗೆ ಆಯಾಯ ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2. ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳಿಗೆ ಆಯುಕ್ತರು ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು, ಅಪರ ಆಯುಕ್ತರು ಕಲಬುರಗಿ ಮತ್ತು ಧಾರವಾಡ. | 05/03/2024 |
| 21 | ನಿರ್ಧಿಷ್ಟಪಡಿಸಿದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿ ಅಧಿಸೂಚನೆ ಪ್ರಕಟಣೆಯಾದ ದಿನಾಂಕಕ್ಕೆ 5 ವರ್ಷ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಶಾಲೆಗಳಿಗೆ ಸ್ಥಳನಿಯುಕ್ತಿಗೊಳಿಸುವುದು. | | ಕೌನ್ಸಿಲಿಂಗ್ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು. |
| 22 | ಪ್ರಸ್ತುತ ಸರ್ಕಾರದ ಆದೇಶದಂತೆ ತಾಂತ್ರಿಕ ಸಹಾಯಕರ ಹುದ್ದೆಯಲ್ಲಿ ಕರ್ತವ್ಯನಿರತರಿಗೆ ಈ ಬಾರಿ ಮಾತ್ರ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿಯವರು ಆಯ್ಕೆಯಾದಲ್ಲಿ ಮಾತ್ರ ಕೌನ್ಸಿಲಿಂಗ್ ಮೂಲಕ ಸ್ಥಳ ಆಯ್ಕೆ ಮಾಡಲು ಅವಕಾಶವಿರುತ್ತದೆ. ಒಂದು ವೇಳೆ ಅವರು ಅಯ್ಕೆಯಾಗದಿದ್ದಲ್ಲಿ ಅಂತಹವರುಗಳನ್ನು ಕೌನ್ಸಿಲಿಂಗ್ ಮೂಲಕ ಮೂಲ ಜಿಲ್ಲೆಯ ಶಾಲೆಗೆ ಸ್ಥಳ ನಿಯುಕ್ತಿಗೊಳಿಸುವುದು. | ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ ಬೆಂಗಳೂರು | ಕೌನ್ಸಿಲಿಂಗ್ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು. |

**(ಬಿ.ಬಿ. ಕಾವೇರಿ)** ಭಾ.ಆ.ಸೇ
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ. ಬೆಂಗಳೂರು.

<u>ಇವರಿಗೆ</u>:–

1. ಅಧ್ಯಕ್ಷರು. ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ. 6ನೇ ಅಡ್ಡರಸ್ತೆ, ಮಲ್ಲೇಶ್ವರಂ. ಬೆಂಗಳೂರು.
2. ನಿರ್ದೇಶಕರು [ಪರೀಕ್ಷೆಗಳು], ಕೆ.ಎಸ್.ಇ.ಎ.ಬಿ ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಅಗತ್ಯ ಕ್ರಮಕ್ಕಾಗಿ.
3. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ.
4. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಪ್ರಾಂಶುಪಾಲರು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ರವರಿಗೆ,
5. ಶಾಲಾಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

<u>ಪ್ರತಿಯನ್ನು</u> :–

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು–1 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು.
4. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ.
5. ಅಪರ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಧಾರವಾಡ .
6. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
7. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳವರಿಗೆ.
8. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
9. ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
10. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
11. ಆಯುಕ್ತರ ಆಪ್ತ ಕಾರ್ಯದರ್ಶಿಯವರಿಗೆ ಮಾಹಿತಿಗಾಗಿ.
12. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಘಟಕ, ಆಯುಕ್ತರ ಕಛೇರಿ, ಶಾ.ಶಿ.ಇಲಾಖೆ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
13. ಹಿರಿಯ ಸಹಾಯಕ ನಿರ್ದೇಶಕರು, ಇಇಡಿಎಸ್ ವಿಭಾಗ, ಆಯುಕ್ತರ ಕಛೇರಿ, ಶಾ.ಶಿ.ಇಲಾಖೆ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ.
14. ಕಛೇರಿ ಪ್ರತಿ.